ಅಪರಂಜಿ

ನವೆಂಬರ್ 2000

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಪ್ರಭಾ

ಎಸ್.ಎನ್. ಗಣೇಶ್

ಕೃಷ್ಣ ಸುಬ್ಬರಾವ್

ಕಮಲಾ ರಾಮಸ್ವಾಮಿ

ಎಂ.ವಿ.ನಾ.

ಎನ್.ಡಿ. ವಾಸುದೇವ್

ಶೋಭಾ ಪ್ರಮೋದ್

ಶಿವಕುಮಾರ್

ಡಾ|| ಶ್ರೀ ವೆಂಕಟರಮಣ

ವಿಜಯರಾಜ ಸುತಾ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ: ರೂ. 500

Ph: 3345259
email: aparanji@hotmail.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 18 ನವೆಂಬರ್- 2000 ಸಂಚಿಕೆ - 2

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ ಪ್ರಕಾಶ್

ದಸರಾದ ಪ್ರೋಗ್ರಾಂನಲ್ಲಿ, ಟಿ.ವಿ.ಯಲ್ಲಿ ಬನ್ನಿ 'ಮಂಟಪ'ವನ್ನು 'ಮಂಟಪಂ' ಎಂದು ಏಕೆ ಕರೆದರು ಎಂಬುದರ ಬಗ್ಗೆ ತನಿಖೆ ನಡೆಯಲೇಬೇಕು!

★★★

ಕಾವ್ಯ ಮಾನವೀಯತೆ ಹೆಚ್ಚಿಸಬೇಕು

- ಕೆ.ಎಸ್.ನ

ಇದು ಬಂಡಾಯ ಸಾಹಿತ್ಯಕ್ಕೂ ಅನ್ವಯಿಸುತ್ತೆ!!

★★★

ಸಹಕಾರ ಸಂಘಗಳಿಗೆ ಮೂಗುದಾರ ಬೇಕೆ?

- ಪತ್ರಿಕೆ

ಮೂಗೇ ಇಲ್ಲದಿದ್ದರೆ ದಾರ ಎಲ್ಲಿಂದ??

★★★

ಜ್ಯೋತಿಷ್ಯ ಶಾಸ್ತ್ರದಲ್ಲಿ ಎಂ.ಎಸ್.ಸಿ. ಪದವಿ ಜಾರಿಗೆ

- ಮು.ಮ. ಜೋಷಿ

ಗ್ರಹಗಳೆಲ್ಲ ನಡುಗಿದವಂತೆ!!

★★★

ಯುವರಾಜ್ ಆಟ ನೋಡಿ, ಸ್ಟೀವ್ ಲ್ಹಾ ಎಂದರಂತೆ!!!

★★★

ರಾಮಮಂದಿರವನ್ನು ಮರೆತವರು ತಮ್ಮ ರಾಜಕೀಯ ಭವಿಷ್ಯವನ್ನೂ ಮರೆಯಬೇಕಾದೀತು

- ವಿ.ಹೆಚ್.ಪಿ. ನಾಯಕ

ತಥಾಸ್ತು!!

★★★

ನಾವು ಹುಟ್ಟಿದ್ದು ಏಕೆ?

- ಓದುಗರ ಪ್ರಶ್ನೆ

ಇದೇ ಪ್ರಶ್ನೆ ನಮ್ಮನ್ನೂ ಕಾಡುತ್ತಿದೆ!!

★★★

ಹೊಸ ವರ್ಷಕ್ಕೆ ನಗರದಲ್ಲಿ ವಾಲ್ವೋ ಬಸ್ ಸಂಚಾರ

- ಸುದ್ದಿ

ಅವು ವಾಲುವುದಿಲ್ಲ ತಾನೆ!!!

★★★

ನಗರದಲ್ಲಿ ಮೂರು ದಿನಗಳಿಗೊಮ್ಮೆ ನೀರು

- ಒಣ ಸುದ್ದಿ

ವಿವರಗಳಿಗೆ www.water.com ಬಳಸಬಹುದೋ??

★★★

ರಾಜಕೀಯ ಲಾಭಕ್ಕೆ ಗಾಂಧಿ, ಜೆ.ಪಿ. ಸ್ಮರಣೆ; ವಿಷಾದ

- ಶೀರ್ಷಿಕೆ

ಇದನ್ನು ಓದಿ ಗಾಂಧಿ, ಜೆ.ಪಿ. ಇಬ್ಬರೂ ಚಕಿತರಾದರಂತೆ!!

★★★

ನಮ್ಮ ನಮ್ಮಲ್ಲಿ

ನನ್ನ ಈ ಅಂಕಣದ ಹಿಂದಿನ ಬರಹಕ್ಕೆ ಬಂದ ಪ್ರತಿಕ್ರಿಯೆಗಳನ್ನು ಕುರಿತು ಮೊನ್ನೆ ಆ.ರಾ. ಮಿತ್ರರೊಂದಿಗೆ ಮಾತನಾಡುತ್ತಿದ್ದೆ. (ಅವರೂ ಸಹಾ ಇತ್ತೀಚಿಗೆ ಇಂಗ್ಲೆಂಡ್ ಪ್ರವಾಸ ಮುಗಿಸಿ ಬಂದಿದ್ದರು) ಹರಟೆಯ ಮಧ್ಯೆ ಅವರು ತಾವು ಭೇಟಿಮಾಡಿದ ಹಲವು ಭಾರತೀಯರ ಅಭಿಪ್ರಾಯಗಳನ್ನು ಉದಹರಿಸುತ್ತಾ, ''ಈ ಇಂಗ್ಲೀಷ್ ಮಂದಿ ಅಗದೀ Insular ಇದಾರ್ರೀ. ಈಗ ನೋಡ್ರಿ, ಎಡಕs ಬಲಕs ಇಬ್ಬರೂ ಅಸ್ಸಲ ಇಂಗ್ಲೀಷ ಮಂದಿನs ಇದ್ದಾರ ಖರೇ. ಆದರ ಮೂವತ್ತು ವರಷಾತು, ಆಶಿಗ್ಗೊಮ್ಮೆ ಬ್ಯಾಶಿಗ್ಗೊಮ್ಮೆ ''ಹಲೋ'' ಅನ್ನೋದು ಬಿಟ್ಟರ ಇವತ್ತಿನ ತನಕ ಬ್ಯಾರೇ ಮಾತ ಆಡಿಲ್ಲ ಸೋಳೆಮಕ್ಕಳು....'' ಎಂದು ಧಾರವಾಡದ ಗೆಳೆಯರೊಬ್ಬರು ಹೇಳಿದ್ದನ್ನು, ಮಿತ್ರರು ನನಗೆ ಹೇಳಿದರು. ಈ ಮಾತನ್ನು ಕೇಳಿ ಮೂವತ್ತು ವರುಷಗಳ ಹಿಂದೆ ಗೆಳೆಯ ಅಲನ್ ಮತ್ತು ನಾನು ಮೊದಲಬಾರಿಗೆ ಭೇಟಿಯಾದ ಸಂದರ್ಭ ನೆನಪಿಗೆ ಬಂತು. ಅನುಭವಗಳ ವೈವಿಧ್ಯತೆಗೆ ತಕ್ಕಂತೆ ದೃಷ್ಟಿಕೋನಗಳೂ ತೀರ ವಿಭಿನ್ನವಾಗುವ ಪ್ರಕ್ರಿಯೆ ನಿಜಕ್ಕೂ ಸೋಜಿಗದ ಸಂಗತಿ.

ಅದೊಂದು ಚಳಿಗಾಲದ ಮಧ್ಯಾಹ್ನ. ಚಳಿಯೆಂದರೆ ಅಂತಿಂತಹ ಚಳಿಯಲ್ಲ. ಹಾಕಿದ್ದ ಓವರ್ ಕೋಟನ್ನು ಭೇದಿಸಿ, ಸ್ವೆಟರನ್ನು ಕೊರೆದು, ನೇರವಾಗಿ ಮೂಳೆಗೇ ನಡುಕ ಬರಿಸುವ, ರಕ್ತ ಹೆಪ್ಪುಗಟ್ಟಿಸುವ ಚಳಿ ಅದು. ಆಗತಾನೇ ನಾನು ಪಾಯಿಂಟನ್ನಿಗೆ ಬಂದು, ನನ್ನ ಅತಿಥೇಯಿನಿ ಡಾರೊಥಿರವರ ಮನೆ ''ಸನ್ನಿಂಗ್ ಡೇಲ್'' ಸೇರಿದ್ದೆ. ಡಾರೊಥಿ ನನ್ನನ್ನು ಬಹು ವಿಶ್ವಾಸದಿಂದ ಸ್ವಾಗತಿಸಿ, ಸುಸಜ್ಜಿತವಾಗಿದ್ದ ನನ್ನ ಕೊಠಡಿಯನ್ನು ಪರಿಚಯಿಸಿ, ಡ್ರಾಯಿಂಗ್ ರೂಮಿನಲ್ಲಿ ಕೂರಿಸಿದ್ದರು. ಆ ನಾಡಿನ ಚಳಿಯನ್ನು ಇದುರಿಸಲು ನಾನು ಧರಿಸಬೇಕಾದ ಉಡುಪುಗಳ ವಿವರವನ್ನು ಆಕೆ ವಿವರಿಸುತ್ತಿದ್ದಂತೆ, ಹೊರಬಾಗಿಲಿನ ಕರೆಗಂಟೆಯ ಸದ್ದಾಯಿತು. ನೋಡುತ್ತಿದ್ದಂತೆ ಒಬ್ಬ ಯುವಕ ಒಳಕ್ಕೆ ಬಂದ. ಸಾಧಾರಣ ಎತ್ತರ, ಕೋಲು ಮುಖ, ನೀಲಿ ಜೀನ್ಸ್ ಮತ್ತು ಗಾಢನೀಲಿ ಪುಲೋವರ್ ಧರಿಸಿದ್ದ ಅವನನ್ನು ''ಇವನು ನನ್ನ ಮಗ ಅಲನ್, ಕೂಮರ್'' ಎನ್ನುತ್ತಾ ನನಗೆ ಪರಿಚಯಿಸಿದರು. ನಗುಮುಖದಿಂದ ಅವ ನನ್ನ ಕೈ ಕುಲುಕಿದಾಗ ಆ ನಗುವಿನಿಲ್ಲಿ ಎಳ್ಳಷ್ಟೂ ಕೃತ್ರಿಮತೆ ಇರಲಿಲ್ಲ.

''ಮಾಮ್, ಕೂಮರ್‌ಗೆ ನಾನು ಊರು ತೋರಿಸಿಕೊಂಡು ಬರ್ತೀನಿ. ಹಾಗೇ ಮನೆಗೂ ಹೋಗಿ, ಹಿಂದಕ್ಕೆ ಬರುವಾಗ ಕ್ಯಾಥರೀನ್‌ನ ಸಹಾ ಇಲ್ಲಿಗೇ ಊಟಕ್ಕೆ ಕರೆದುಕೊಂಡು ಬರಬಹುದು ತಾನೇ?'' ಎಂದು ಅಲನ್ ಕೇಳಿದ.

"ಓಹೋ ಖಂಡಿತವಾಗಿ. 'ಆದರೆ ನಿನ್ನ ಕಾರಿನಲ್ಲಿ ಎರಡೇ ಸೀಟ್ ಇವೆಯಲ್ಲೋ. ಕ್ಯಾಥರೀನ್ ಎಲ್ಲಿ ಕೂಡುತ್ತಾಳೆ?"

"ಕೂಮರ್ ತೊಡೆಯಮೇಲೆ ಕೂತರಾಯಿತು. ನಿಂದೇನೂ ಅಭ್ಯಂತರ ಇಲ್ಲ ತಾನೇ ಕೂಮರ್?"

ಅಲನ್‌ನ ಪ್ರಶ್ನೆಗೆ ನನ್ನಲ್ಲಿ ಉತ್ತರ ಸಿದ್ಧವಿರದಿದ್ದುದರಿಂದ ನಾನು ಸುಮ್ಮನೆ ದೇಶಾವಾರದ ನಗೆ ಬೀರಿದೆ. ಊರೆಲ್ಲಾ ತಿರುಗಿ ಅಲನ್‌ನ ಮನೆಗೆ ಹೋದ ನಂತರ ಕ್ಯಾಥರೀನಳ ಪರಿಚಯವಾಯಿತು. ಹೊಸ ಸಂಸಾರ. ಕಳೆದ ವರ್ಷವಷ್ಟೇ ಅವರ ಮದುವೆಯಾಗಿತ್ತು. ಲೋಕಾಭಿರಾಮವಾಗಿ ಮಾತನಾಡಿ, ಅಲ್ಲಿಂದ ಸನ್ನಿಂಗ್ ಡೇಲಿಗೆ ಹಿಂತಿರುಗುವಾಗ ಅಲನ್‌ನ ಟೂ ಸೀಟರ್ ಕಾರಿನ ಹಿಂದೆ ಮಕ್ಕಳಿಗಾಗಿ ಇದ್ದ ಸೀಟಿನಲ್ಲಿ ಕುಳಿತು ಬಂದೆ. ಆ ಮೊದಲ ಭೇಟಿಯಲ್ಲೇ ಅಲನ್ ಮತ್ತು ಕ್ಯಾಥರೀನ್ ದಂಪತಿಗಳ Easy Informality ಇಂದಿಗೂ ನೆನಪಿನಲ್ಲಿ ಹಸಿರಾಗಿದೆ.

ಡಾರೊಥಿಯವರ ಮನೆಯಲ್ಲಿದ್ದಾಗ ಅನೇಕ ಇಂಗ್ಲೀಷ್ ಕುಟುಂಬಗಳ ಪರಿಚಯವಾಯಿತು. ಕ್ರಂಪ್ಸಾಲಿನಲ್ಲಿದ್ದ ಸ್ಟೀಫೆನ್ ಮತ್ತು ಜೈಲೀನ್ ಕೆಂಪ್ ನನ್ನನ್ನ ಅನೇಕಬಾರಿ ಊಟಕ್ಕೆ ಕರೆದು ವಿಶ್ವಾಸದಿಂದ ಮಾತನಾಡಿಸಿದ್ದರು. ಒಮ್ಮೆ ಅವರ ಮನೆಯಲ್ಲಿ ನನ್ನ ಓವರ್ ಕೋಟನ್ನು ತೆಗೆದು ಗೂಟಕ್ಕೆ ನೇತು ಹಾಕುವಾಗ ಕೋಟಿನಲ್ಲಿನ ನೇತುಹಾಕುವ ಕೊಂಡಿ ಕಿತ್ತುಬಂದಿತ್ತು. ಕೋಟನ್ನು ಹಾಗೇ ನೇತುಹಾಕಿ ಒಳಕ್ಕೆ ಹೋಗಿದ್ದೆ. ಊಟದ ನಂತರ ಹೊರಕ್ಕೆ ಬಂದು ಕೋಟನ್ನು ತೆಗೆದುಕೊಳ್ಳುವಾಗ ಕೋಟು ಆಗತಾನೇ ಹೊಲಿದಿದ್ದ ಕೊಂಡಿಯಿಂದ ಭದ್ರವಾಗಿ ತೂಗುಬಿದ್ದದ್ದನ್ನು ಗಮನಿಸಿದೆ. ಪಕ್ಕದಲ್ಲೇ ನಿಂತಿದ್ದ ಜೈಲೀನ್ "ಕೊಂಡಿ ಕಿತ್ತದ್ದನ್ನು ಯಾಕೆ ಹೇಳಲಿಲ್ಲ. ಇನ್ನೇನಾದರೂ ಹೊಲಿಯುವುದಿದ್ದರೆ ನನಗೆ ಖಂಡಿತ ಹೇಳು ಸಂಕೋಚ ಬೇಡ" ಅಂತ ಆಗ್ರಹಪಡಿಸಿದರು.

ಇಂಗ್ಲೆಂಡಿನಲ್ಲಿ ನನ್ನ ವ್ಯಾಸಂಗ ಮುಗಿಸಿ ಭಾರತಕ್ಕೆ ಮರಳಿದ ನಂತರ ಎರಡು ದಶಕಗಳ ಕಾಲ ವ್ಯಾವಹಾರಿಕ ಜೀವನದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು ನನಗೆ ಅನಿವಾರ್ಯವಾಯಿತು. ಈ ಸುಧೀರ್ಘ ಕಾಲಾವಧಿಯಲ್ಲಿ ಅಲನ್ ವರ್ಷಕ್ಕೊಮ್ಮೆ ನನಗೆ ತಪ್ಪದೇ ಕಾಗದ ಬರೆಯುತ್ತಿದ್ದ. ನಾನೂ ಅಷ್ಟೇ ರೆಗ್ಯುಲರ್ ಆಗಿ ಉತ್ತರಿಸುತ್ತಿದ್ದೆ. ಅವನ ಮೊದಲ ಮಗು ರೆಬೆಕ್ಕಾ ಹುಟ್ಟಿದ ಹಲವು ತಿಂಗಳಲ್ಲಿ ಆರತಿ ನಮ್ಮ ಮನೆಯನ್ನು ಬೆಳಗಿದಳು. ಅನಂತರ ಮಗ ಜೇಮ್ಸ್‌ನ ಜನನ. ಅಲನ್ ಕುಟುಂಬ ಆಫ್ರಿಕಾಕ್ಕೆ ವಲಸೆ. ಅಲ್ಲಿನ ಪರಿಸರದ ಹೊಸ ಅನುಭವ. ಅವರ ಪುಟ್ಟ ಸಂಸಾರಕ್ಕೆ ಕಿರಿಯ ಕುವರಿ ವಿಕ್ಟೋರಿಯಾಳ

ಸ್ಪರ್ಧೆ, ಇವೆಲ್ಲ ಸಂಗತಿಗಳು ಸ್ನೇಹದ ಎಳೆಗಳಂತೆ ಪರಸ್ಪರ ಅರಿವು ಮೂಡಿಸಿ ನಮ್ಮ ಗೆಳೆತನವನ್ನು ಜೀವಂತವಾಗಿರಿಸುವುದರಲ್ಲಿ ಸಹಾಯಕವಾದವು. ಎರಡು ದಶಕಗಳ ನಂತರ ತೊಂಭತ್ತರಲ್ಲಿ ನಾನು ಮತ್ತೊಮ್ಮೆ ಯೂರೋಪ್ ಪ್ರವಾಸ ಮಾಡುವ ಪ್ರಸಂಗ ಬಂದಾಗ, ಸಹಜವಾಗಿಯೇ ನನ್ನ ಹಳೆಯ ಗೆಳೆಯ ಗೆಳತಿಯರನ್ನು ಭೇಟಿಮಾಡುವ ಕಾರ್ಯಕ್ರಮ ನನ್ನ ಅಜೆಂಡಾದಲ್ಲಿ ಆದ್ಯತೆಯನ್ನು ಪಡೆದಿತ್ತು.

ಈ ಬಾರಿ ಅಲನ್ ಸಂಸಾರ ಬ್ರಾಲಿಂಗ್ಟನ್ನಿನ ಹೊರ ಅಂಚಿನಲ್ಲಿ ಒಂದು ಫಾರ್ಮ್ ಹೌಸಿನಲ್ಲಿ ವಾಸಿಸುತ್ತಿತ್ತು. ಆರತಿ ರೆಬೆಕ್ಕಾಳೊಡನೆ ಸೈಕ್ಲಿಂಗ್ ಹೊರಡುತ್ತಿದ್ದಂತೆ, ಮಂಗಳೆ, ಕ್ಯಾಥರೀನ್‌ಗೆ ಭಾರತೀಯ ಅಡುಗೆಯೊಂದನ್ನು ಮಾಡಿ ತೋರಿಸಲು ಅಡುಗೆ ಮನೆ ಸೇರಿದಳು. ಅಲನ್ ನನ್ನನ್ನು ಒಂದು ''ವಾಕ್''ಗೆ ಕರೆದೊಯ್ದ. ಈ ಇಂಗ್ಲೀಷ್ ವಾಕ್‌ಗಳು ನಮ್ಮಲ್ಲಿನ ಗಾಳಿ ಸಂಚಾರದಂತಲ್ಲ. ವಾಕ್‌ಗಾಗಿಯೇ ಪ್ರತ್ಯೇಕವಾಗಿ ನಿರ್ಮಿಸಿದ ಕಾಲುಹಾದಿಗಳಲ್ಲಿ ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ಊರಾಚೆಯ ಕಾಡಿನಲ್ಲಿ ಹತ್ತಾರು ಮೈಲಿಗಳಷ್ಟು ನಡೆದಾಡುವುದು ಇದರ ವೈಖರಿ. ಅಂದು ನಾವು ಪೆನ್ನೈನ್ ಗಿರಿಶ್ರೇಣಿಯಲ್ಲಿ ನಡೆದಾಡುತ್ತಾ ಎರಡು ದಶಕಗಳ ಅನುಭವಗಳನ್ನು ಪರಸ್ಪರ ಹಂಚಿಕೊಂಡೆವು. ಅಲನ್, ತನ್ನ ಫಾರ್ಮ್‌ನಲ್ಲಿದ್ದ ದನಕರುಗಳು, ಬಾತುಕೋಳಿ, ಬಾತುಹುಂಜ (ಗ್ಯಾಂಡರ್) ಅವುಗಳ ಪಾಲನೆ ಪೋಷಣೆ ಕುರಿತು ಒಂದು ಪುಟ್ಟ ಭಾಷಣವನ್ನೇ ಬಿಗಿದ. ಮನೆಗೆ ಹಿಂತಿರುಗಿದ ಮೇಲೆ, ನಾವು ಬೆಂಗಳೂರಿನಿಂದ ಮನೆಯ ಮಕ್ಕಳಿಗಾಗಿ ತಂದಿದ್ದ ಉಡುಗೊರೆಗಳ ವಿತರಣೆ. ಐದು ವರುಷದ ಪುಟ್ಟ ವಿಕ್ಟೋರಿಯಾ, ಮಿರರ್ ವರ್ಕ್‌ನ ಲಂಗ ಜಂಪರ್ ತೊಟ್ಟು ಸಂಭ್ರಮದಿಂದ ನಲಿದಾಡಿದ ದೃಶ್ಯ ಸುಲಭವಾಗಿ ಮರೆಯಲಾಗದ್ದು.

ಹಲವು ತಿಂಗಳ ಹಿಂದೆ ಮಗಳನ್ನು ನೋಡಲು ಹೋಗುವ ಹಂಚಿಕೆ ಮನದಲ್ಲಿ ಮೂಡಿದಾಗ, ನಾನು ಮಾಡಿದ ಮೊಟ್ಟಮೊದಲ ಕೆಲಸ ಅಲನ್ ಮತ್ತು ಅವನ ತಂಗಿ ಬಾರ್ಬರಾ ಇವರಿಗೆ ನಮ್ಮ ಪ್ರವಾಸದ ಬಗ್ಗೆ ಈಮೇಯ್ಲ್ ಕಳಿಸಿದ್ದು. ಬಾರ್ಬರಾಳಿಂದ ಉತ್ತರ ಒಡನೆಯೇ ಬಂತು. ಆದರದ, ಸೌಹಾರ್ದಯುತ, ಎದೆ ತುಂಬಿಬರುವಂತಹ ಆಹ್ವಾನವನ್ನು ತಂಗಿ ಬಾರ್ಬರಾ ಕಳಿಸಿದ್ದಳು. ಒಂದೆರಡು ವಾರಗಳಾದರೂ ಅಲನ್‌ನಿಂದ ಉತ್ತರವಿಲ್ಲ. ಕೊನೆಗೆ ವಿಧಿಯಿಲ್ಲದೇ ಬಾರ್ಬರಾಳನ್ನೇ ವಿಚಾರಿಸಬೇಕಾಯಿತು. ಅವಳ ಉತ್ತರ ಸಂತಸದ ಸುದ್ದಿಯೇನಾಗಿರಲಿಲ್ಲ. ಅಲನ್‌ಗೆ ಹೃದಯಾಘಾತವಾಗಿತ್ತು. ಆಗತಾನೇ ಬೈಪಾಸ್ ಸರ್ಜರಿಯಿಂದ ಚೇತರಿಸಿಕೊಳ್ಳುತ್ತಿದ್ದನಂತೆ. ಅದಕ್ಕೂ ಹೆಚ್ಚಿನ ಆಘಾತವೆಂದರೆ

ಅವನ ಪತ್ನಿ ಕ್ಯಾಥರೀನ್ ಅವನಿಂದ ಬೇರೆಯಾದದ್ದು. "ನೀನು ಜುಲೈನಲ್ಲಿ ಬರುವ ಹೊತ್ತಿಗೆ ಅಲನ್ ಚೇತರಿಸಿಕೊಳ್ಳುವ ಸಂಭವ ಇದೆ. ಕಾದುನೋಡುವ" ಎಂದು ಬಾರ್ಬರಾ ತನ್ನ ಪತ್ರ ಮುಗಿಸಿದ್ದಳು.

ನಾವು ಸ್ಕಾಟ್ಲೆಂಡಿಗೆ ಹೋದ ಹೊಸದರಲ್ಲೇ, ನನ್ನ ಮಗಳು ನಮಗೆ ಒಂದು ವಾರ ಲೇಕ್ ಡಿಸ್ಟ್ರಿಕ್ಟ್ ಹಾಲಿಡೇ ಅಂತ ತಾನೇ ನಿರ್ಧರಿಸಿ ಅದಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದಳು. ಕಂಬ್ರಿಯಾ ಪ್ರಾಂತ್ಯದಲ್ಲಿರುವ ಸರೋವರಗಳನ್ನು ನೋಡಿ, ಅವುಗಳ ರಮಣೀಯತೆಯನ್ನು ಸವಿಯಬೇಕಾದರೆ ಕನಿಷ್ಟಪಕ್ಷ ಒಂದು ವಾರದಷ್ಟಾದರೂ ಹಿಡಿಯುತ್ತದೆ. ಈ ಅವಧಿಯನ್ನು ಹೋಟೆಲಿನಲ್ಲಿ ಕಳೆಯುವ ಬದಲು, ನಮ್ಮದೇ ಆದ ಒಂದು ಕಾಟೇಜನ್ನು ಬಾಡಿಗೆಗೆ ಪಡೆಯುವ ಅವಕಾಶ ನಮಗೆ ದೊರಕಿತ್ತು. ನ್ಯೂಬಿಗಿನ್ ಆನ್ ಲ್ಯೂನ್ ಎಂಬ ಪುಟ್ಟ ಹಳ್ಳಿಯಲ್ಲಿ ನಾವು ಇಂತಹದೊಂದು "ಸೆಲ್ಫ್ ಕೇಟರಿಂಗ್ ಕಾಟೇಜ್"ನ ಆಶ್ರಯ ಪಡೆದು, ನಮ್ಮ ದಿನನಿತ್ಯದ ಪ್ರೇಕ್ಷಣೆಯನ್ನು ನಡೆಸಿದ್ದೆವು. ನಮ್ಮನ್ನು ನೋಡಲು ಅಲನ್ ಅಲ್ಲಿಗೇ ಬಂದು ನಮ್ಮೊಡನೆ ಒಂದು ರಾತ್ರಿ ತಂಗಿದ್ದ.

ಅಲನ್ ತನ್ನ ಹೃದಯಾಘಾತದಿಂದ ಚೇತರಿಸಿಕೊಂಡಿದ್ದು ನನಗೆ ಸಂತಸ ತಂದಿತ್ತು. ಆ ಬೆಳಗ್ಗೆ ಅಲನ್ "ಕೂಮರ್, ನಿನ್ನ ಹೊಟ್ಟೆ ಕರಗಬೇಕಾದ್ದು ಅತ್ಯಗತ್ಯ. ಬ್ರಿಸ್ಕ್ ವಾಕಿಂಗ್ ಅದಕ್ಕೆ ತಕ್ಕ ಪರಿಹಾರ. ಇವತ್ತು ನಾವಿಬ್ಬರೂ ಇಲ್ಲಿನ ಮೂರ್ ಪ್ರದೇಶಗಳಲ್ಲಿ ಟ್ರೆಕಿಂಗ್ ಹೋಗೋಣ. ಅದು ಖಂಡಿತ ನಿನಗೊಂದು ಮರೆಯಲಾಗದ ಅನುಭವ ಆದೀತು." ಅಂತ ಹೇಳಿ ಹುರಿದುಂಬಿಸಿದ. ಬೆಳಗ್ಗೆ ಹತ್ತೂವರೆ ಗಂಟೆಗೆ ನಾವು ಮನೆ ಬಿಟ್ಟು ಹತ್ತಿರದ ಗುಡ್ಡದ ದಿಕ್ಕಿನಲ್ಲಿದ್ದ ಕಾಲುಹಾದಿಯನ್ನು ಹಿಡಿದು ಹೊರಟೆವು.

ಬಹು ಹಿಂದೆ "ದ ಹೌಂಡ್ ಆಫ್‌ದ ಬಾಸ್ಕರ್ ವಿಲ್ಸ್"ನ ಸ್ಟೇಪಲ್ ಟನ್ ಡೆವನ್ ಷೈರಿನ ಮೂರ್ ಪ್ರದೇಶದಲ್ಲಿ ಓಡಾಡುತ್ತಿದ್ದುದನ್ನು ಮನದಲ್ಲಿ ಕಲ್ಪಿಸಿಕೊಂಡಾಗಿನಿಂದ ಮೂರ್‌ಗಳನ್ನು ನೋಡಿ ಅಲ್ಲಿ ನಡೆದಾಡಬೇಕೆಂಬ ಆಸೆ ಈಗ ಈಡೇರಿತ್ತು. ಮೂರ್ ಎಂದರೆ ಅದೊಂದು ಗೋಮಾಳ ಪ್ರದೇಶ. ಸಾರ್ವಜನಿಕ ಸ್ವತ್ತಾದ್ದರಿಂದ ಆ ಪ್ರದೇಶಕ್ಕೆ ಬೇಲಿ ಇರುವುದಿಲ್ಲ. ನಾವು ಸಂಚರಿಸುತ್ತಿದ್ದ ವೆಸ್ಟ್ ಮೂರ್ ಲ್ಯಾಂಡ್ ಪ್ರಾಂತ್ಯ ಗುಡ್ಡಗಾಡಿನಿಂದ ಕೂಡಿದ್ದು, ನಮ್ಮ ಕಾಲುಹಾದಿ ಬಹುತೇಕ ಗುಡ್ಡಗಳನ್ನು ಬಳಸಿ ನಡೆದಿತ್ತು. ಈ ಪ್ರದೇಶದಲ್ಲಿ ಇಡೀ ವರ್ಷ ಬಿರುಸಾದ ಗಾಳಿ ಇರುತ್ತದಂತೆ. ಆ ಕಾರಣದಿಂದ ಗುಡ್ಡದ ಮೇಲೆ ದಟ್ಟವಾದ ಕುರುಚಲು ಗಿಡಗಳಿದ್ದವೇ ಹೊರತು, ಯಾವುದೇ ವಿಧವಾದ ಮರಗಳಿರಲಿಲ್ಲ. ಎರಡು ಗುಡ್ಡಗಳ ನಡುವಣ ಕಣಿವೆಗಳಲ್ಲಿ ಗಾಳಿ ಜೋರಾಗಿ

ಜೀಸದ ಕಾರಣ ಅಲ್ಲಿ ಮರಗಳು ಸೊಂಪಾಗಿ ಬೆಳೆದಿದ್ದವು. ಸುತ್ತಲಿನ ಪರಿಸರಕ್ಕೆ ಪ್ರಕೃತಿ ಎಷ್ಟು ಚೆನ್ನಾಗಿ ಹೊಂದಿಕೊಳ್ಳುತ್ತದೆ ನೋಡಿ. ಅದೂ, ಇದೂ ಹರಟುತ್ತಾ ನಾವು ದಾರಿ ಸವೆಸಿದ್ದೆವು.

ನಡೆಯುತ್ತಿದ್ದಂತೆ ನಮ್ಮ ಕಾಲುಹಾದಿ ನೇರವಾಗಿ ಫಾರ್ಮ್ ಹೌಸ್ ಒಂದರ ಗೇಟಿಗೆ ನಮ್ಮನ್ನು ತಲುಪಿಸಿತ್ತು. ನಾವು ಸೇರಬೇಕಾದದ್ದು ವಾತ್ ಎಂಬ ಹಳ್ಳಿಗೆ. ''ಫಾರ್ಮ್ ಹೌಸಿನಲ್ಲಿ ಯಾರಾರೂ ಇರಲೇಬೇಕು. ಅವರನ್ನ ಕೇಳಿ ದಾರಿ ತಿಳಿಯೋಣ'' ಎನ್ನುತ್ತಾ ಅಲನ್ ಗೇಟಿನ ಒಳಗೆ ನಡೆದ. ಇವನ ಧಾರ್ಷ್ಟ್ಯವನ್ನು ನೋಡಿದ ಫಾರ್ಮ್ ನಾಯಿ ಕೋಪ ತಡೆಯಲಾಗದೇ ಜೋರಾಗಿ ಬೊಗಳಲು ಪ್ರಾರಂಭಿಸಿತು. ತಕ್ಕಮಟ್ಟಿಗೆ ಎತ್ತರ ಗಾತ್ರಕ್ಕಿದ್ದ ನಾಯಿ ಅದು. ಸರಪಳಿ ಕಟ್ಟಿಲ್ಲದಿದ್ದರೂ ಅದು ನಿಂತಲ್ಲಿಂದ ಬೊಗಳುತ್ತಿತ್ತೇ ವಿನಹ ನಮ್ಮ ಹತ್ತಿರ ಬರಲಿಲ್ಲ. ಅಲನ್ ಫಾರ್ಮ್ ಮನೆಯತ್ತ ನಡೆಯುತ್ತಲೇ ಇದ್ದ. ನಾನು ಹೆದರುತ್ತಲೇ ಅವನ ಹಿಂದೆ ನಡೆದೆ. ನಾಯಿಯನ್ನು ಸಮೀಪಿಸಿದಾಗ ಅದು ತನ್ನ ಗಾಯಗೊಂಡ ಬಲ ಮುಂಗಾಲನ್ನು ಮೇಲಕ್ಕೆ ಮಡಿಚಿಟ್ಟಿಕೊಂಡಿದ್ದನ್ನು ಗಮನಿಸಿದೆ. ಅಲನ್‌ಗೆ ಅಸಾಧ್ಯ ಪ್ರಾಣಿದಯೆ. ಅದರ ಕಾಲನ್ನು ಪರೀಕ್ಷಿಸಲು ಅದರ ಹತ್ತಿರ ಹೋದ. ನಾಯಿಯ ಬೊಗಳಿಕೆ ತಾರಕಕ್ಕೇರಿತು ಅದನ್ನು ಕೇಳಿಸಿಕೊಂಡ ಇನ್ನೊಂದು ನಾಯಿ ಮನೆ ಆಚೆ ಬದಿಯಿಂದ ಇನ್ನೂ ಜೋರಾಗಿ ಬೊಗಳಲು ಶುರು ಹಚ್ಚಿತು. ಎರಡನೇ ನಾಯಿಯ ದನಿ ಸ್ವಲ್ಪ ಮಟ್ಟಿಗೆ ಹುಲಿಯ ಘರ್ಜನೆಯನ್ನು ಹೋಲುತ್ತಿತ್ತು. ಇಷ್ಟೆಲ್ಲಾ ಗಲಾಟೆ ಆಗುತ್ತಿದ್ದರೂ ಮನೆಯಿಂದ ಒಂದು ನರಪಿಳ್ಳೆ ಈಚೆಗೆ ಬರಲಿಲ್ಲ.

''ಅಲನ್, ಇಲ್ಲಿ ಯಾರೂ ಇರೋ ಹಾಗಿಲ್ಲ. ಹಿಂದಕ್ಕೆ ಹೋಗೋಣ'' ಅಂತ ನಾನು ಮೆಲ್ಲಗೆ ನನ್ನ ಅಭಿಪ್ರಾಯ ಮಂಡಿಸಿದೆ. ಅವನಿಗೆ ನಾಯಿಯ ಕಾಲನ್ನು ಪರೀಕ್ಷಿಸುವ ಆಶೆ. ನನಗೆ ಇಲ್ಲೆಲ್ಲೋ ಬಂದು ನಾಯಿಗಳಿಂದ ಕಾಲು ಕಡಿಸಿಕೊಂಡು ಆಸ್ಪತ್ರೆಗೆ ಬೀಳಬೇಕಲ್ಲಾ ಎಂಬ ಚಿಂತೆ. ಕೊನೆಗೆ ಅಲನ್ ''ಮನೆಯಲ್ಲಿ ಯಾರೂ ಇರೋಹಾಗಿಲ್ಲ'' ಅನ್ನೋ masterful conclusion ಗೆ ಬಂದ.

ನಾವು ಬಂದ ದಾರಿಯಲ್ಲೇ ಹಿಂತಿರುಗಲು ಉದ್ಯುಕ್ತರಾದೆವು. ನಡೆಯುತ್ತಾ ಎಲ್ಲೋ ದಾರಿ ತಪ್ಪಿತೆಂದು ಕಾಣುತ್ತದೆ. ಒಮ್ಮೆಲೇ ನಾವು ಗುಡ್ಡದ ಹುಲ್ಲಿನ ಮೇಲೆ ನಡೆಯುತ್ತಿದ್ದುದನ್ನು ಕಂಡುಕೊಂಡೆವು. ಕಾಲುಹಾದಿಯ ಸುಳಿವೇ ಇರಲಿಲ್ಲ. ''ಹೀಗೇ ಮುಂದಕ್ಕೆ ನಡೆಯೋಣ. ಎಲ್ಲಾದರೊಂದು ಕಡೆ ಹಾದಿ

ಕಾಣಲೇಬೇಕು'' ಎನ್ನುತ್ತಾ ದೃಢವಾದ ಆತ್ಮವಿಶ್ವಾಸದಿಂದ ಅಲನ್ ಮುಂದಕ್ಕೆ ನಡೆದ. ಅದಮ್ಯ ಅನುಮಾನದಿಂದಲೇ ನಾನು ಅವನನ್ನು ಹಿಂಬಾಲಿಸಿದೆ. ಮುಂದೆ ಒಂದು ಮರದ ಬೇಲಿ ಕಾಣಿಸಿತು. ಬೇಲಿಗೆ ಎಲ್ಲೂ ಗೇಟ್ ಇರಲಿಲ್ಲ. ಇಂಗ್ಲೀಷ್ ಫಾರ್ಮ್‌ಗಳಲ್ಲಿ ಬೇಲಿ ದಾಟಲು ಅನುಕೂಲವಾಗುವಂತೆ ಸ್ಟೈಲ್ ಎಂಬ ಮರದ ಮೆಟ್ಟಲನ್ನು ಬೇಲಿಯ ಪಕ್ಕಕ್ಕೆ ಕಟ್ಟಿರುತ್ತಾರೆ. ಒಂದೂವರೆ ಅಡಿ ಎತ್ತರದ ಈ ಮೆಟ್ಟಿಲ ಮೇಲೆ ಬಲಗಾಲಿಟ್ಟು ಎಡಗಾಲನ್ನು ಬೇಲಿಯ ಮೇಲೆ ಹಾಯಿಸಿ ಆಚೆಬದಿಯ ಮೆಟ್ಟಲಮೇಲೆ ಕಾಲಿಟ್ಟು ಬೇಲಿ ದಾಟಬಹುದು. ಅಷ್ಟೇನೂ ಕಷ್ಟವಿಲ್ಲದೇ ಬೇಲಿ ದಾಟಿದೆವು. ಸ್ವಲ್ಪ ದೂರ ನಡೆದ ಮೇಲೆ ಇನ್ನೊಂದು ಬೇಲಿ ಇದಿರಾಯಿತು. ಇದಕ್ಕೆ ಎಲ್ಲೂ ಸ್ಟೈಲ್ ಇರಲಿಲ್ಲ. ಅಂತೂ ಹೇಗೋ ಇದನ್ನೂ ದಾಟಿದ್ದಾಯಿತು. ಇಲ್ಲಿನವರೆಗೂ ಲವಲವಿಕೆಯಿಂದ ಮಾತನಾಡುತ್ತಿದ್ದ ಅಲನ್ ಈಗ ಚಿಂತಾಕ್ರಾಂತನಾಗಿದ್ದಂತೆ ಕಂಡಿತು. ''ನಾವೇನೂ ದಾರಿ ತಪ್ಪಿಲ್ಲ ತಾನೇ?'' ಅಂತ ನಾನು ಅನಾವಶ್ಯಕವಾದ ಪ್ರಶ್ನೆಯೊಂದನ್ನು ಕೇಳಿದೆ.

''ಹಾಗೇನೂ ಇಲ್ಲ. ಆದರೆ ಹಾಳಾದ್ದು ಮೋಡ ಇರೋದ್ರಿಂದ ದಿಕ್ಕು ತಿಳೀತಾ ಇಲ್ಲ. ಯಾರನ್ನಾದ್ರೂ ಕೇಳೋಣ ಅಂದ್ರೆ ಇವತ್ತು ಭಾನುವಾರ. ಹಳ್ಳಿಕಡೆ ರೈತರಿಗೆ ದೈವಭಕ್ತಿ ಜಾಸ್ತಿ. ಎಲ್ಲಾ ಚರ್ಚಿಗೆ ಹೋಗಿರ್ತಾರೆ. ಸ್ವಲ್ಪ ಮುಂದೆ ಹೋಗಿ ನೋಡೋಣ. ಡೋಂಟ್ ವರಿ. ''ಅಲನ್‌ನ ಉತ್ತರ ಕೇಳಿ, ನಾಸ್ತಿಕವಾದದಲ್ಲೂ ಸ್ವಲ್ಪ ಹುರುಳಿರಬಹುದೇನೋ ಎನ್ನಿಸಿತು. ಅಷ್ಟು ಹೊತ್ತಿಗೆ ಸ್ವಲ್ಪ ದೂರದಲ್ಲಿ ಯಾವುದೋ ಒಂದು ಟ್ರಾಕ್ಟರ್ ಶಬ್ದ ಕೇಳಿಬಂತು. ಅದರ ಚಾಲಕ ಮಹಾ ಕರುಣಾಳು. ನಮ್ಮನ್ನ ತನ್ನ ವಾಹನದಲ್ಲಿ ಕೂರಿಸಿಕೊಂಡು ಊರಿನ ರಸ್ತೆಯವರೆಗೂ ಸಾಗಿಸಿದ. ಮನೆ ಸೇರಿದಾಗ ಮಧ್ಯಾಹ್ನ ಎರಡೂವರೆ.

★★★

ಬರುವ ಜನವರಿಗೆ ಅಲನ್, ಬಾರ್ಬರಾ ಮತ್ತು ಪೀಟರ್ ಬೆಂಗಳೂರಿಗೆ ಬರಲಿದ್ದಾರೆ. ಸಂಕ್ರಾಂತಿಯ ದಿನ ಮಲ್ಲೇಶ್ವರದ ಮಾರುಕಟ್ಟೆಯ ಜನಜಂಗುಳಿಯನ್ನು ಅವರಿಗೆ ತೋರಿಸುವ, ಮನೆಯ ತೋಟದಲ್ಲಿ ಕುಳಿತು ಅವರೆಲ್ಲರೊಂದಿಗೆ ಹರಟುವ ಅವಕಾಶವನ್ನು ನಾನು ಇದಿರು ನೋಡುತ್ತಿದ್ದೇನೆ.

ನಾನೇನು ಇಂಗ್ಲೆಂಡಿನಲ್ಲಿ ಮೂವತ್ತು ವರುಷಗಳ ಕಾಲ ಇದ್ದಿಲ್ಲ. ಆದರೂ ಇಂಗ್ಲೀಷರಂತೆ ಕೈ ಕುಲುಕಬೇಕಾದರೆ, ಅಥವಾ ಭಾರತೀಯರಂತೆ ಕೈ ಜೋಡಿಸಬೇಕಾದರೆ, ಎರಡೂ ಕೈಗಳ ಮಿಲನ ಅಗತ್ಯ ಅನ್ನಿಸುತ್ತದೆ ನನಗೆ.

– ಶಿವಕುಮಾರ್

"…. ಚಿನ್ನದ ಲೇಪನ!"

- ಪ್ರಭಾ

ಊರಿನ ಹಿರಿಯ ರಾಮಜ್ಜ ಸಾಯುವ ಕಾಲಕ್ಕೆ ಒಂದು ಉಯಿಲು ಬರೆದು ಸತ್ತ. ಉಯಿಲಿನ ಮುಖ್ಯ ಅಂಶ ಅಂದರೆ ಊರಿನ ಹನುಮಂತರಾಯನ ದೇವಸ್ಥಾನದ ಗೋಪುರದ ಮೇಲಿನ ಕಲಶಕ್ಕೆ ತಾನು ಸೇರಿಸಿ ಉಳಿಸಿರುವ ಹಣದಲ್ಲಿ ಚಿನ್ನದ ಲೇಪನ ಮಾಡಿಸಬೇಕು, ಸ್ವರ್ಗದಿಂದ ನಾನು ಈ ಭೂಮಿಕಡೆ ನೋಡಿದಾಗಲೆಲ್ಲಾ ಈ ಕಲಶ ಹೊಳೆಯುತ್ತಿರುವುದನ್ನು ನೋಡಿ ನನ್ನ ಆತ್ಮ ನಾನು ಹುಟ್ಟಿ ಬೆಳೆದ ಊರನ್ನ ನೆನೆಸಿಕೊಂಡು ಸಂತೋಷಿಸಬೇಕು ಅಂತ. ಈ ಉಯಿಲಿನ ಈ ಬಹುಮುಖ್ಯ ಅಂಶಕ್ಕೆ ಹನುಮಂತದೇವರ ದೇವಸ್ಥಾನದ ಪೂಜಾರಿಯಾದ ನರಸಿಂಹ ಜೋಯಿಸರು ಕಾರ್ಯ ಮಾಡಿಸಿಕೊಡುವ ಎಕ್ಸಿಕ್ಯೂಟರ್ ಆಗಿರತಕ್ಕದ್ದು ಎಂದು ಸೇರಿಸಿದ್ದ.

ನರಸಿಂಹ ಜೋಯಿಸರಿಗೆ ಈ ಉಯಿಲಿನ ಸಂಗತಿ ತಿಳಿದಾಗಲಿಂದ ಅವರ ಮನಸ್ಸು ಗರಿಕೆದರಿ ಕುಣೀತು. ತನ್ನ ಸಾವಿನ ಕಾಲದಲ್ಲಿ ರಾಮಜ್ಜ ಹನುಮಂತ ದೇವರನ್ನ ನೆನೆಸಿಕೊಂಡ ಅಂತ ಒಂದು ಖುಷಿ ಆದರೆ ತಾನು ಸತ್ತ ನಂತರವೂ ಈ ಊರಿನ ದೇವಸ್ಥಾನದ ಕಲಶವನ್ನ ಆತ ಸ್ವರ್ಗದಲ್ಲಿ ಕೂತು ನೋಡುತ್ತಾನೆ ಎಂಬಂತಹ ಕಲ್ಪನೆ ಈ ಖುಷಿಗೆ ಕೋಡು ಮೂಡಿಸಿತ್ತು. ಸತ್ತ ರಾಮಜ್ಜನ ಈ ಕಡೇ ಆಸೆ ಪೂರೈಸಲು ನರಸಿಂಹ ಜೋಯಿಸರು ಕಾರ್ಯೋನ್ಮುಖರಾದರು. ತೋವಿನಕೆರೆಯಿಂದ ಅಕ್ಕಸಾಲಿಗರನ್ನು ಕರೆಯಿಸಿದರು ಕಲಶಕ್ಕೆ ಚಿನ್ನದ ಮೆರುಗು ಹೊದಿಸುಕ್ಕೆ ಆಗುವ ಖರ್ಚುವೆಚ್ಚದ ಲೆಕ್ಕ ಪಡೆದುಕೊಂಡರು. ಕಲಶವನ್ನ ನೆಲದ ಮೇಲೆ ಇಳಿಸಿ ನಂತರ ಅದಕ್ಕೆ ಮೆರುಗು ಕೊಡಬೇಕು ಅಂಬೋ ಸ್ಥಪತಿಗಳ ಮಾತಿಗೆ ಗೌರವ ನೀಡಿದರು. ಅದರಂತೆ ಕಲಶ ನೆಲಕ್ಕೆ ಇಳಿಸುವುದಕ್ಕೆ ದಿನ ನಿಷ್ಕರ್ಷೆ ಆಯಿತು.

ರಾಮಜ್ಜ ದಾಸಾಲುಕುಂಟೆಯ ಒಂದು ಗಟ್ಟಿ ಕುಳ. ಹಣಕಾಸಿನ ಲೇವಾದೇವಿ ಆತನ ಉಪಕಸುಬು, ಜತೆಗೆ ಜಮೀನುದಾರಬೇರೆ. ಆತ ಹೆಚ್ಚು ಕಡಿಮೆ ದಾಸಾಲುಕುಂಟೆಯ ಎಲ್ಲರಿಗೂ ಬಡ್ಡಿಗೆ ಹಣ ನೀಡಿದ್ದವನು; ಬದುಕಿದ್ದಾಗ ಅಸಲು ಬಡ್ಡಿ ಎರಡನ್ನೂ ವಾಯಿದೆಗೆ ಮುಂಚೆಯೇ ಸಾಲಗಾರರ ಹೆಗಲ ಮೇಲೆ ಶನಿದೇವರು ಕೂತ ಹಾಗೆ ಕೂತು ವಸೂಲು ಮಾಡಿದಾತ.

ಈ ಕಾರಣದಿಂದ ಊರಿನಲ್ಲಿ ಅವರಿಗೆ ಆಗದವರು ಸುಮಾರು ಜನ - ಅದರಲ್ಲೂ ಹಳ್ಳಿ ರಾಜಕೀಯದಲ್ಲಿ ಈ ಸದ್ಯಕ್ಕೆ ವಿರೋಧ ಪಕ್ಷದ ನಾಯಕನ ಸ್ಥಾನ ಅಲಂಕರಿಸಿರುವ ಕೂಲಿಕಾರರ ಸಂಘದ ನಾಯಕ - ಗೋಪಣ್ಣ ಅಗ್ರಗಣ್ಯ. ಬಡವರ ತಲೆ ಒಡೆದು ಸಂಪಾದಿಸಿದ ದುಡ್ಡನ್ನ ಈತ ಊರಿನಲ್ಲಿ ಶಾಲೆ, ಆಸ್ಪತ್ರೆ ಕಟ್ಟಲು ವಿನಿಯೋಗಿಸುವುದು ಬಿಟ್ಟು ದೇವಸ್ಥಾನದ ಮೇಲಿನ ಕಲಶಕ್ಕೆ ಚಿನ್ನದ ಮುಲಾಮ ಲೇಪಿಸಲು ಬರೆದಿದ್ದಾನಲ್ಲಾ ಎಂತಹ ಬೂರ್ಜ್ವಾ ಈತ ಎಂಬ ರೋಷ ಗೋಪಣ್ಣನ ಹೃದಯದಲ್ಲಿ ಎದ್ದು ಕುಣಿದಾಡಿತು. ದೇವಸ್ಥಾನದ ಇತಿಹಾಸ ಕೆದಕಿದ. ಸುಮಾರು ಮುನ್ನೂರು ವರ್ಷದ ಹಳೆಯ ದೇವಸ್ಥಾನ ಎಂದು ತಾನೇ ತೀರ್ಮಾನಿಸಿದ. ಅವನ ತಲೆ ವೇಗವಾಗಿ ಓಡಿತು.

ಮಾರನೆಯ ದಿವಸವೇ ಹತ್ತಿರದ ನಗರದಿಂದ ಒಂದು ಜೀಪು ಬಂದು ದೇವಸ್ಥಾನದ ಎದುರು ನಿಂತಿತು. ಅದರಿಂದ ಕ್ಯಾಮೆರಾ ಹೊತ್ತಿದ್ದ ಏಳೆಂಟು ಜನ ಧಡ ಧಡ ಇಳಿದರು. ದೇವಸ್ಥಾನದ ಸುತ್ತಲೂ ಎತ್ತಲೆಂದರೆ ಅತ್ತ ನಿಂತು ದೇವಾಲಯದ ಹಲವಾರು ಚಿತ್ರ ತೆಗೆದರು. ಕೆಲವು ಪತ್ರಕರ್ತರು ದೇವಾಲಯ ಹತ್ತಿ ಅಲ್ಲಿನ ಕಲಶದ ಕ್ಲೋಸ್ ಅಪ್ ಫೋಟೋ ಸಹ ತೆಗೆದರು. ದೇವಾಲಯದ ಪೂಜಾರಿ ಜೋಯಿಸರನ್ನು ಇಂಟರ್‌ವ್ಯೂ ಮಾಡಿದರು. ಸಂಜೆ ಆದಹಾಗೆ ಪತ್ರಕರ್ತರನ್ನು ಹೊತ್ತು ತಂದಿದ್ದ ಜೀಪು ನಗರದೆಡೆಗೆ ವಾಪಸ್ಸಾಯಿತು.

ಒಂದೆರಡು ದಿವಸದಲ್ಲೇ ದಾಸಾಲುಕುಂಟೆಯ ಹನುಮದೇವರ ಬಗೆಗೆ ಸವಿವರವಾದ ಲೇಖನ ಪತ್ರಿಕೆಯಲ್ಲಿ ಅಚ್ಚಾಯಿತು. ಸುಮಾರು ಏಳುನೂರು ವರುಷಗಳ ಹಿಂದಿನ ದೇವಾಲಯ ಇದೆ. ಇದರ ಕಲಶಕ್ಕೆ ಒಂದು ರೀತಿಯ ಪುರಾತನ ಬೆಲೆ ಇದೆ. ಅದನ್ನು ಕಾಪಾಡತಕ್ಕದ್ದು ಮತ್ತು ದೇವಸ್ಥಾನದ ಉಳಿವಿಗಾಗಿ ಸರ್ಕಾರ ದೇವಾಲಯವನ್ನು ಮಜರಾಯಿ ಇಲಾಖೆಗೆ ವಹಿಸತಕ್ಕದ್ದು. ದೇವಾಲಯದ ಕಲಶ ಸಹ ಪ್ರಾಚೀನ ಕಾಲದಾದ್ದರಿಂದ ಅದನ್ನೂ ಸಹ ಸರ್ಕಾರ ಕಾಪಾಡತಕ್ಕದ್ದು ಎಂಬುದು ಎಲ್ಲಾ ಪತ್ರಿಕೆಗಳಲ್ಲಿ ಬಹುಮುಖ್ಯವಾದ ಅಂಶ. ಪತ್ರಿಕೆಯಲ್ಲಿ ಲೇಖನ ಪ್ರಕಟವಾದ ಒಂದು ವಾರದದಲ್ಲಿ ದಾಸಾಲುಕುಂಟೆ ಇಡೀ ದೇಶದಲ್ಲಿ ಪ್ರಖ್ಯಾತವಾಗಿ ಹೋಯಿತು. ದಾಸಾಲುಕುಂಟೆಯ ದೇವಾಲಯವನ್ನು ನೋಡುವುದಕ್ಕೆ ಎಲ್ಲೆಡೆಯಿಂದ ಜನ ಬರಲು ಆರಂಭಿಸಿರು. ಮುಖ್ಯ ರಸ್ತೆಯ ಪಕ್ಕದಲ್ಲೇ ಟೀ ಅಂಗಡಿ, ಬೀಡಿ, ಸಿಗರೇಟು ಅಂಗಡಿ ಎಳನೀರು ಅಂಗಡಿ, ದೇವಾಲಯದ ಚಿತ್ರಗಳನ್ನು ಮಾರುವ ಅಂಗಡಿಗಳ ಸಂಗಡ ದಿಢೀರೆಂದು ಕೆಲವು ಫೋಟೋಗ್ರಾಫರುಗಳೂ ಹುಟ್ಟಿಕೊಂಡರು. ದೇವಾಲಯಕ್ಕೆ ಬಂದವರು ಹೆಸರು

ಕೆಲ್ತುವವರ ಮುಷ್ಟಿನಲ್ಲಿ ದೇವಾಲಯ ಮಗುಚಿಬಿದ್ದರೇನು ಎಂಬ ಭಯ ಅದರ ಜೊತೆಗೆ ದೇವಾಲಯದ ಪ್ರಾಂಗಣ ಮತ್ತು ಗರ್ಭಗುಡಿಯ ಸುತ್ತಲಿರುವ ಮಿಥುನ ವಿಗ್ರಹಗಳಿಗೆ ಹಾನಿ ಆದರೇನು, ಕಳುವಾದರೇನು ಎಂಬ ಭಯ ಬೇರೆ ಸೇರಿಕೊಂಡಿತು. ಭಾನುವಾರ ರಾತ್ರಿ ಹನುಮಂತನಿಗೆ ಅಭಿಷೇಕ ಮಾಡಿ ಪ್ರಸಾದ ಹಂಚಿದ ನಂತರ ಜೋಯಿಸರು ಗೋಪಣ್ಣನ ಮನೆ ಹತ್ತಿರ ನಡೆದರು.

ಗೋಪಣ್ಣ ಮನೇಲೇ ಇದ್ದ. ಅವನ ಸುತ್ತಲೂ ಅವನ ಶಿಷ್ಯ ಪಟಾಲಾಂ ನೆರೆದಿತ್ತು. ಶಂಕರಶಾಸ್ತ್ರಿ, ರಾಮು, ಗೋವಿಂದ ಇವರೆಲ್ಲಾ ಸುತ್ತಲೂ ನೆರೆದಿದ್ದರು. ಕಾರ್ಲ್‌ಮಾರ್ಕ್ಸ್ ಪಾಠ ಹೇಳ್ತಿದಾನೆ ಅಂತ ಕಾಣುತ್ತೆ ಅಂತಂದುಕೊಂಡೇ ಜೋಯಿಸರು ಒಮ್ಮೆ ಕೆಮ್ಮಿದರು. ಗೋಪಣ್ಣ ತಲೆ ಎತ್ತಿ ನೋಡಿದ ಓಹೋ ಜೋಯಿಸರು? ಪುರೋಹಿತಶಾಹಿಯ ಮೇರುಧ್ವಜರು! ಬನ್ನಿ ಬನ್ನಿ ಮತ್ಯಾವ ದೇವಸ್ಥಾನದ ಕಲಶಕ್ಕೆ ಚಿನ್ನಬೆಳ್ಳಿ ತಾಮ್ರದ ಲೇಪನ ಮಾಡಿಸುಕ್ಕೆ ಹೊರಟಿದೀರಿ?... ಅಂತ ವ್ಯಂಗ್ಯವಾಗಿ ಜೋಯಿಸರನ್ನ ಆಹ್ವಾನಿಸಿದ.

ಜೋಯಿಸರು ಅಲ್ಲೇ ಇದ್ದ ಕಟ್ಟೆ ಮೇಲೆ ಕೂತರು. ದೇವರು ದೇವಾಲಯದ ವಿಷಯವಾಗಿ ಹೀಗೆ ಹಗುರವಾಗಿ ಮಾತಾಡಬಾರದು ಅಂತ ಗೊತ್ತಿದೆ ತಾನೇ? ಹಾಗೆ ನೋಡಿದರೆ ನಿಮ್ಮಪ್ಪ ಹನುಮಂತ ದೇವರಿಗೆ ಹರಕೆ ಹೊತ್ತ ಮೇಲೇನೇ ನೀನು ಹುಟ್ಟಿದ್ದು ತಿಳಿತೋ?... ಅಂದರು.

'ಹೌದು ನಮ್ಮ ಅಪ್ಪನಂತಹವರು ಹರಕೆ ಹೊತ್ತು ಪೂಜಾರ್ರಿಗೆ ಮುಡಿಪು ಅಂತ ಸಕ್ಕರೆ ತುಪ್ಪ ಹಾಲು ಹಣ್ಣು ಹಂಚಿದ್ದಕ್ಕೇ ಈಗ ನಾವು ಹೀಗಿದೀವಿ. ನೀವು ಹಾಗಿದೀರಿ... ಅಂದ. ಗೋಪಣ್ಣ ನರಪೇತಲ ಆದರೆ ಜೋಯಿಸರು ಕಡಿದರೆ ನಾಲ್ಕಾಳು ಅಂಥಾರಲ್ಲಾ ಹಾಗಿದ್ದೋರು. ಹನ್ನೆರಡನೇ ನಂಬರಿನ ಚಪ್ಪಲಿ ಅವರಿಗೆ ಬೇಕಿತ್ತು ಅಂದರೆ ಅವರ ಆಕಾರ ಎಂತಹದ್ದು ಅಂಥ ತಿಳಿದುಕೋಬಹುದು. ಗೋಪಣ್ಣನ ಮಾತಿಗೆ ಜೋಯಿಸರು ಕೋಪ ಮಾಡಿಕೊಳ್ಳಲಿಲ್ಲ. ಅವಡು ಕಚ್ಚಿದರು ಅಷ್ಟೇ. 'ದೇವರು ದೇವಾಲಯ ಊರಿಗೆ ಸೇರಿದ್ದು, ಅದನ್ನು ಉಳಿಸಿಕೊಳ್ಳೋದು ಬಿಡೋದು ನಿಮ್ಮಂತಹವರ ಕೈಯಲ್ಲಿರೋದು...' ಅಂತ ಹೇಳಲು ಆರಂಭಿಸಿದರು. ಬಾಗಿಲ ಬಳಿ ಗೋಪಣ್ಣನ ಹೆಂಡತಿ ಬಂದು ನಿಂತಳು 'ನಮಸ್ಕಾರ ಜೋಯಿಸ್ರೇ' ಅಂದಳು. ಮಗು ಹೇಗಿದೇಮ್ಮಾ ಈಗ ಜ್ವರ ವಾಸೀನೇ... ಅಂತ ಜೋಯಿಸರು ಮನೆ ಒಳಹೊಕ್ಕರು ಹಿಂದಿನ ದಿವಸ ತಾನೇ ಗೋಪಣ್ಣನ ಹೆಂಡತಿ ದೇವಾಲಯಕ್ಕೆ ಬಂದು ಮಗೂಗೆ ಜ್ವರ ಅಂತ ಹೇಳಿ ಹನುಂತನ ತಾಯಿತ ತಗೊಂಡು ಹೋಗಿದ್ದಳು. ಹತ್ತು ಹನ್ನೆರಡು ನಿಮಿಷ ಮನೆ

ಒಳಗೆ ಮಾತುಕತೆ ನಡೆಸಿದ ಜೋಯಿಸರು ಆಚೆ ಬಂದರು. 'ನಿಮ್ಮ ಪಾಠಗಳು ಮುಗಿದ ನಂತರ ಹಾಗೇ ದೇವಸ್ಥಾನದ ಹತ್ತಿರ ಬಾ...' ಅಂತ ಗೋಪಣ್ಣನನಿಗೆ ಹೇಳಿ ಹೊರ ಹೆಜ್ಜೆ ಹಾಕಿದರು. 'ಬರ್ತೀನಿ ಬರ್ತೀನಿ...' ಅಂತ ಗೋಪಣ್ಣ ಅಪಹಾಸ್ಯವಾಗಿ ನಕ್ಕ. ನಗು ಕೇಳಿಸಿದರೂ ಜೋಯಿಸರು ಅದರೆಡೆಗೆ ಗಮನ ನೀಡಲಿಲ್ಲ.

ಸಂಗಡಿಗರನ್ನ ಕಳಿಸಿ ಗೋಪಣ್ಣ, ಮನೆ ಒಳಸೇರದ. ಆತನ ಹೆಂಡತಿ ದೇವಸ್ಥಾನಕ್ಕೆ ಹೋಗಿ ಜೋಯಿಸರನ್ನ ಕಂಡು ಬನ್ನಿ ಅಂತ ಬಲವಂತ ಮಾಡಿದಳು 'ನಾನೇಕೆ ಹೋಗಬೇಕು?' ಅಂತ ಗೋಪಣ್ಣ ವರಾತ ತೆಗೆದ. 'ಯಾಕೆ ಅಂದರೆ ಮಗೂಗೆ ಹುಶಾರಿಲ್ಲ ಅಂತ ಕೇಳಿದ ಕೂಡಲೇ ಕೈಲಿದ್ದ ಕೆಲಸ ಬಿಟ್ಟು ಜೋಯಿಸರು ಮನೇಗೆ ಬಂದು ಮಗೂಗೆ ತಾಯಿತ ಕಟ್ಟಿದ್ದು ಮರೆತುಬಿಟ್ಟಿರಾ? ನಮ್ಮ ಕಷ್ಟಕ್ಕೆ ಅವರು ಆಗ್ತಾರೆ ಅವರು ಒಂದು ನಿಮಿಷ ಬಾ ಅಂತ ಕರೆದಾಗ ಹೋಗದೇ ಇದ್ದರೆ ನಮಗೇನು ಮರ್ಯಾದೆ?...' ಹೆಂಡತಿ ಈ ತನಕ ತನ್ನೆದುರು ನಿಂತು ಮಾತೇ ಆಡಿದವಳಲ್ಲ. ಗೋಪಣ್ಣ ಮುಖ ಗಂಟು ಹಾಕಿ ಜೋಯಿಸರ ಬಳಿ ನಡೆದ.

'ಈ ದೇವಾಲಯ ಐವತ್ತು ವರ್ಷಕ್ಕಿಂತಲೂ ಹಳೇದಲ್ಲ ಅಂತ ಎಲ್ಲರಿಗೂ ಗೊತ್ತು. ಕಲಶಕ್ಕೆ ಏಳುನೂರು ವರ್ಷ ಆಗಿದೆ ಅಂತ ಕಿತಾಪತಿ ಮಾಡಿ ಪತ್ರಿಕೇಲಿ ಬರೆಸಿರೋರು ಯಾರು ಅಂತ ನನಗೆ ಗೊತ್ತು. ಅದಕ್ಕಿಂತ ಹೆಚ್ಚಾಗಿ ನಿಮ್ಮಪ್ಪ, ತಾತ, ಮುತ್ತಾತಂದಿರನ್ನ ಈ ದೇವರು ಕಾಪಾಡಿರೋದು ಮರೀಬೇಡ. ನೀನೇನೋ ನಾಸ್ತಿಕ ಅಂದರೆ ನಿನ್ನಿಂದಾಗಿ ನಿನ್ನ ಪೂರ್ವಜರು ರೌರವ ನರಕಕ್ಕೆ ಹೋಗಬೇಕೇ?...' ಜೋಯಿಸರು ಗೋಪಣ್ಣನ ಮುಖದ ಮೇಲೆ ನೀರಿಳಿಸಿದರು. ಕೊಂಚ ಹೊತ್ತು ಮತ್ತೆ ಮಾತನಾಡಿದರು ಗೋಪಣ್ಣ ಮನೆಗೆ ಮರಳಿದ.

ಮಾರನೇ ವಾರ ನಗರದಿಂದ ಮತ್ತೊಂದು ಗುಂಪು ಬಂತು. ದೇವಾಲಯದ ಮೇಲಿರುವ ಕಲಶ ಕೆಳಗಿಳಿಸಿ ಅದೇ ತರಹದ ಮತ್ತೊಂದು ಕಲಶ ನಿರ್ಮಿಸಿ ಅದನ್ನ ದೇವಾಲಯದ ಮೇಲಿಡುವ ಸೂಚನೆ ತಂದಿದ್ದರು. ಜೋಯಿಸರು 'ಆಗಲಿ ಹಾಗೇ ಮಾಡಿ...' ಅಂದರು. ದೇವಾಲಯದ ಮೇಲಿನಿಂದ ಕಲಶ ಕೆಳಗಡೆ ಇಳಿಸಿದಾಗಲೇ ಅದು ಅರವತ್ತು ಕೆ.ಜಿ. ತೂಕದ್ದು ಅಂತ ತಿಳಿದದ್ದು.

ನಗರದಿಂದ ಕುಶಲ ಕೆಲಸಗಾರರು ಬಂದರು. ಈ ಕಲಶವನ್ನ ಮೂಲವಾಗಿ ಇಟ್ಟುಕೊಂಡು ಅದರ ಪಕ್ಕದಲ್ಲೇ ಮತ್ತೊಂದು ಕಲಶ ನಿರ್ಮಿಸಿದರು. ಮಾರನೇ

ವಾರ ಹಳೇ ಕಳಶ ನಗರದ ಪುರಾತತ್ತ್ವ ಇಲಾಖೆಗೆ ಸೇರಬೇಕು ಅದೇ ದಿವಸ ಹೊಸಾ ಕಲಶ ದೇವಾಲಯ ಏರಬೇಕು ಅಂತ ದಿನ ಸಹ ಗೊತ್ತು ಆಯಿತು.

ಊರಿನ ಹಿರಿಯ ರಾಮಜ್ಜನ ಉಯಿಲಿನ ಪ್ರಕಾರ ಕಲಶಕ್ಕೆ ಚಿನ್ನದ ಲೇಪನ ಆಗಬೇಕು ಅಂದರು ಜೋಯಿಸರು. ಅದು ಕೂಡದು ಅಂತ ಗೋಪಣ್ಣ ಸತ್ತ ಹಿರಿಯರ ಆತ್ಮಕ್ಕೆ ಸಂತೋಷ ಅಂತೂ ನೀಡಲು ಆಗುತ್ತಿಲ್ಲ ಕಲಶ ನಗರಕ್ಕೆ ಹೋಗ್ತಿದೆ. ಆದರೆ ಅದರ ಮೇಲೆ ಚಿನ್ನದ ಲೇಪನ ಆದರೂ ಆಗಲಿ ಅಂತ ಜೋಯಿಸರು ಮತ್ತು ಹಳ್ಳಿ ಹಿರಿಯರ ವಾದಕ್ಕೆ ಮನ್ನಣೆ ಸಿಕ್ಕಿತು. ಸರಕಾರದ ಖರ್ಚಿನಲ್ಲಿ ಹೊಸಾ ಕಲಶಕ್ಕೆ ರಾಮಜ್ಜನ ಹಣದಲ್ಲಿ ಹಳೇ ಕಲಶಕ್ಕೆ ಚಿನ್ನದ ಲೇಪನ ಜರುಗಿತು. ಮಾರನೇ ದಿವಸವೇ ಕಲಶಗಳ ಸ್ಥಾಪನೆ. ರಾತ್ರಿ ಹನ್ನೆರಡಾದರೂ ಜೋಯಿಸರಿಗೆ ನಿದ್ರೆ ಸುಳಿವಿಲ್ಲ. ರಾಮಜ್ಜನಿಗೆ ಮೋಸ ಮಾಡ್ತಿದೀನಿ ಅಂಬೋ ಗಿಲ್ಟಿ ಕಾನ್ಷಿಯಸ್ನು! ಹನ್ನೆರಡೂವರೆಗೆ ಗೋಪಣ್ಣನ ಮನೆಗೆ ಬಂದರು. ಬಾ ನನ್ನ ಸಂಗಡ ಅಂದರು. ನಗರಕ್ಕೆ ಹೋಗಬೇಕಿದ್ದ ಕಲಶವನ್ನು ಒಂದು ರೂಂ ನಲ್ಲಿರಿಸಿದ್ದರು. ದೇವಾಲಯ ಏರಬೇಕಾದ ಕಲಶ ದೇವಾಲಯದ ಮುಂಭಾಗದಲ್ಲಿನ ಕೋಣೆಯಲ್ಲಿ ಇತ್ತು. ಎರಡೂ ಕಲಶಗಳನ್ನ ಇಟ್ಟಿರೋ ಸ್ಥಳ ಸುಮಾರು ಮೂರು ಮೈಲಿ ದೂರ.

ಗೋಪಣ್ಣ ಜೋಯಿಸರನ್ನು ಹಿಂಬಾಲಿಸಿದ. ಮೊದಲು ನಗರಕ್ಕೆ ಹೋಗಿಬೇಕಿದ್ದ ಕಲಶದ ಹತ್ತಿರ ನಡೆದರು. ಇಬ್ಬರೂ ಸೇರಿ ಅರವತ್ತು ಕೇಜಿಯ ಕಲಶವನ್ನು ಭುಸಭುಸ ಉಸಿರು ಬಿಡುತ್ತಾ ಹೊತ್ತು ದೇವಾಲಯದ ಮುಂದಿರಿಸಿದರು. ಅಲ್ಲಿದ್ದ ಕಲಶವನ್ನು ಮತ್ತೆ ಹೊತ್ತು ಮೊದಲಿನ ಕಲಶ ಇದ್ದ ಸ್ಥಳದಲ್ಲಿ ಇರಿಸಿದರು. ಬೆವರು ಒರೆಸಿಕೊಳ್ಳುತ್ತಾ ಜೋಯಿಸರು ದೇವಾಲಯದ ಪಕ್ಕದಲ್ಲಿದ್ದ ಅವರ ಮನೆಗೆ ಗೋಪಣ್ಣನ್ನ ಕರೆದೊಯ್ದರು. ಬೇಲದ ಕಾಯಿ ಏಲಕ್ಕಿ ಪಚ್ಚೆಕರ್ಪೂರ ಹಾಕಿದ ಪಾನಕವನ್ನ ಚೆಂಬಿನ ತುಂಬ ನೀಡಿ ಕುಡಿ ಅಂದರು. ಗೋಪಣ್ಣ ಚೆಂಬು ಕೆಳಗಿರಿಸಿದ ನಂತರ 'ಅಪರೂಪಕ್ಕೆ ದೇವರ ಸೇವೆ ಮಾಡಿದ್ದೀ ಪ್ರಾಣ ದೇವರು ನಿನ್ನನ್ನ ಕಾಪಾಡುತ್ತಾರೆ...' ಅಂದರು.

ಗೋಪಣ್ಣ ''ಪುರೋಹಿತ ಶಾಮಿ ಕಿತಾಪತಿ'' ಅಂತ ಮನೆಗೆ ವಾಪಸ್ಸು ನಡೆದ. ಪ್ರಾಣದೇವರ ಮುಂದೆ ಜೋಯಿಸರು ನಿಂತರು.

'ದೇವರೇ ನಾನು ಮಾಡಿದ್ದು ಸರಿ ತಾನೇ?' ಅಂದರು

ಪ್ರಾಣ ದೇವರು ಉತ್ತರಿಸಲಿಲ್ಲ.

ನೀನು ಮಾತಾಡಲಿಲ್ಲ ಅಂದರೆ ಅದು ಸರಿ ಅಂತಲೇ. ಹಿರಿಯನ ಆತ್ಮಕ್ಕೆ ಶಾಂತಿ ತಂದ ಕೆಲಸ ಇವತ್ತು ನಾನು ಮಾಡಿದೀನಿ. ಅಲ್ಲ ಸಾರಿ ತಪ್ಪಾಯಿತು. ನಿನ್ನ ಕೃಪೆಯಿಂದ ಇಂತಹ ಕೆಲಸ ಸಾಧ್ಯವಾಯಿತು. ನಾನ್ಯಾರು ಮಾಡಿದೆ ಅಂತ ಹೇಳಿಕೊಳ್ಳೋದಿಕ್ಕೆ? ಎಲ್ಲಾ ನೀನು ಮಾಡಿಸಿದ್ದು... ಅಂತ ಪ್ರಾಣದೇವರಿಗೆ ಅಡ್ಡಬಿದ್ದರು.

ಪ್ರಾಣ ದೇವರು ಮೊದಲೇ ಸೊಟ್ಟಗಿರುವ ಮೂತಿಯನ್ನು ಮತ್ತೂ ಸೊಟ್ಟ ಮಾಡಿ ನಕ್ಕಿದ್ದು ಜೋಯಿಸರ ಕಣ್ಣಿಗೆ ಬೀಳಲಿಲ್ಲ!

(ಗಿಯೋವಾನಿ ಗರೇಷಿ ವಾಸನೆ ಬರ್‍ತ್ತಿದೆಯೇನು?

ಸೈಕಲ್ ಸವಾರಿಯ ಆ ದಿನಗಳು

- ಎಸ್. ಎನ್. ರಮೇಶ್

ಇತ್ತೀಚೆಗೆ 'ಸೈಬರ್' ಅನ್ನುವ ಪದ ಹೇಗೆ ನಮ್ಮನ್ನು ದಂಗುಬಡಿಸುತ್ತೋ, ಒಂದು ಕಾಲಕ್ಕೆ 'ಸೈಕಲ್' ಹಾಗೆನ್ನಿಸುತ್ತಿತ್ತು. ಎಷ್ಟು ಜನರ ಹತ್ತಿರ ತಾನೆ ಇರ್ತಿತ್ತು ಆ ದ್ವಿಚಕ್ರಿ! ಬಹಳ ಕಮ್ಮಿ ಜನರ ಹತ್ತಿರ. ನಮ್ಮ ರಸ್ತೆಗೆಲ್ಲಾ ನನಗೆ ತಿಳಿದಂತೆ ನಾಲ್ಕೇ ಮನೆಗಳಲ್ಲಿ ಸೈಕಲ್ ಇದ್ದದ್ದು. ಸೈಕಲ್ ಇಲ್ಲದ ನನ್ನಂಥ ಹುಡುಗರಿಗೆ ಅವುಗಳ ಮೇಲೇ ಕಣ್ಣು.

ಇದು ನಾನು ಕಂಡದ್ದಲ್ಲ ಕೇಳಿದ್ದು. ಆಗ, ಅಂದರೆ ಸೈಕಲ್ ಇನ್ನೂ ಹೊಸ ಸೃಷ್ಟಿಯೆನ್ನಿಸಿಕೊಂಡಿದ್ದಾಗ ಅದರ ಫ್ರೀವ್ಹೀಲ್ ಕಂಡುಹಿಡಿದಿರಲಿಲ್ಲ. ಹಿಂದಿನ ಚಕ್ರಕ್ಕೆ ಫ್ರೀವ್ಹೀಲ್‌ಗೆ ಬದಲು ಫಿಕ್ಸೆಡ್ ವ್ಹೀಲ್ ಇತ್ತಂತೆ, ನಮ್ಮ ಸರ್ಕಸ್ ಸೈಕಲ್‌ಗಳ ಹಾಗೆ. ಹಿಂದಕ್ಕೆ ಪೆಡಲ್ ತುಳಿದರೆ ಹಿಂದಕ್ಕೆ ಚಲಿಸುವುದು, ಮುಂದಕ್ಕೆ ತುಳಿದರೆ ಮುಂದಕ್ಕೆ. ಸೈಕಲನ್ನು ನಿಲ್ಲಿಸಬೇಕಾದರೆ ಪೆಡಲನ್ನು ಹಿಂದಕ್ಕೆ ಒತ್ತಬೇಕು ಅಷ್ಟೆ. ಆ ಸೈಕಲ್ ಹತ್ತುವ ವಿಧಾನವೇ ಒಂದಿತ್ತು. ಹಿಂದಿನ ಚಕ್ರದ ಮಧ್ಯದಿಂದ ಒಂದು ಗೂಟ ಚಾಚಿಕೊಂಡಿರುತ್ತಿತ್ತು, ಸುಮಾರು ಮೂರಿಂಚು ಉದ್ದ. ಇದು ಸೈಕಲಿನ ಎಡಭಾಗದಲ್ಲಿರುತ್ತಿತ್ತು. ಇದರ ಮೇಲೆ ಎಡಗಾಲಿರಿಸಿ ಸ್ವಲ್ಪ ದೂರ ದೇಕಿಕೊಂಡು ಓಡಿ ಅನಾಮತ್ತಾಗಿ ಎಗರಿ ಸೀಟಿನ ಮೇಲೆ ಪ್ರತಿಷ್ಠಾಪಿಸಿಕೊಳ್ಳತಕ್ಕದು. ಆಗ ಪೆಡಲುಗಳು ತಾವಾಗಿಯೇ ಸುತ್ತತೊಡಗಿದ್ದು ಅವುಗಳನ್ನು ಹುಡುಕಿದ ಮೇಲೆ ಕಾಲುಗಳನ್ನಿಟ್ಟು ಯಥಾಪ್ರಕಾರ ತುಳಿಯತಕ್ಕದ್ದು. ಆ ಕಾಲಕ್ಕೆ ಷರಾಯಿ ಅಷ್ಟು ಬಳಕೆಯಲ್ಲಿರಲಿಲ್ಲದ್ದರಿಂದ 'ಸೈಕಲ್ ಕಚ್ಚೆ' ಎಂಬ ಒಂದು ಪಂಚೆ ಕಟ್ಟುವ ವರಸೆ ಕಂಡುಕೊಂಡಿದ್ದರು. ಇದು ಸುಮಾರು ಈಗಿನ ಜೀನ್ಸ್‌ನಷ್ಟೇ ಸಂಕುಚಿತ ಪೋಷಾಕು. ಹಿಂದೆ ನಮ್ಮ ಅಡ್ವಾನಿಯವರು ಧರಿಸುತ್ತಿದ್ದ ಕಚ್ಚೆ ಪಂಚೆ ನೆನೆಸಿಕೊಂಡರೆ ನಿಮಗೆ ಸೈಕಲ್ ಕಚ್ಚೆಯ ಕಲ್ಪನೆ ಬರುತ್ತೆ. ಆದರೆ ಈ ನಡುವೆ ಅಡ್ವಾನಿಗಳು ಕೂಡ ಸ್ವಲ್ಪ ಸಡಿಲ ಕಚ್ಚೆಯನ್ನೇ ಕಟ್ಟಲು ಕಲಿತಿದ್ದಾರೆ. (ಮಾತು ಎಲ್ಲಿಂದ ಎಲ್ಲಿಗೋ ಹೋಯಿತು, ಬಿಡಿ.)

ಈ ಫಿಕ್ಸೆಡ್ ವ್ಹೀಲ್‌ಗಳ ಕಾಲ ಕಳೆಯುವ ಹೊತ್ತಿಗೆ, ಅಂದರೆ ನಮ್ಮ ತಂದೆಯ ಕಾಲಕ್ಕೆ ಫ್ರೀವ್ಹೀಲ್ ಚಾಲ್ತಿಗೆ ಬಂದಿತ್ತು. ಹಾಗೂ ಆ ಆರೋಹಣಗೂಟ ಮಾಯವಾಗಿತ್ತು. (ಈ ಸಂಗತಿಗಳೆಲ್ಲ ಈಗಿನವರಿಗೆ ತಿಳಿಯದ ಕಾರಣದಿಂದ

ವಿವರವಾಗಿ ಹೇಳುತ್ತಿದ್ದೇನೆ.) ಫ್ರೀವ್ಹೀಲ್ ಬಂದ ನಂತರ ಸೈಕಲ್ ಹತ್ತುವ ಈಗಿನ ವಿಧಾನವೂ ಜಾರಿಗೆ ಬಂದು ಉಳಿದುಕೊಂಡಿದೆ.

ಈ ಎರಡು ವಿಧಾನಗಳನ್ನು ಬಿಟ್ಟರೆ ಸೈಕಲ್ ಹತ್ತುವ ಮೂರನೇ ಅಪರೂಪದ ವಿಧಾನವೂ ಒಂದಿತ್ತು. ಇದೇನೆಂದರೆ, ಸೈಕಲನ್ನು ಒಂದು ಸೈಜುಕಲ್ಲು ಅಥವಾ ಒಂದು ಕಟ್ಟೆಯ ಪಕ್ಕಕ್ಕೆ ದೂಡಿಕೊಂಡು ಹೋಗುವುದು. ಕಲ್ಲಿನ ಮೇಲೆ ಹತ್ತಿ ಸೈಕಲ್ ಮೇಲೆ ಆಸೀನರಾಗುವುದು. ನಂತರ ಕಾಲನ್ನು ಹಿಂದಕ್ಕೆ ಒತ್ತಿ ಪೆಡಲ್ ತುಳಿದು ಮುಂದಕ್ಕೆ ಚಲಿಸುವುದು. ಹೀಗೆ ಹತ್ತಿರ ಮೇಲೆ ಇಳಿಯುವುದು ಅಷ್ಟು ಸುಲವಲ್ಲ. ಇಳಿಯುವ ಸಮಯ ಬಂದಾಗ, ಒಂದು ದೀಪದ ಕಂಬ ಹುಡುಕಿ ಅದರ ಪಕ್ಕಕ್ಕೆ ಹೋಗಿ ಎರಡು ಕೈಗಳಿಂದಲೂ ಆ ಕಂಬವನ್ನು ಹಿಡಿದು ತಬ್ಬಿಕೊಂಡು, ಆಮೇಲೆ ಸೈಕಲ್‌ನಿಂದ ನಿಧಾನವಾಗಿ ಸೇರ್ಪಡೆಯಾಗುವುದು.

ಈ ಸಮಯದಲ್ಲಿ ನಮ್ಮ ಸುಬ್ಬಾಭಟ್ಟರ ಕತೆ ನೆನಪಿಗೆ ಬರುತ್ತದೆ. ಬೆಳಗಿನ ಜಾವ ಭಟ್ಟರು ಎಲ್ಲಿಗೋ ಹೋಗಿ ವಾಪಸು ಬರುವಾಗ ಸೈಕಲಿನ ಮೇಲಿಂದ ಇಳಿಯಲು ಮನೆಯ ಬಳಿಯ ಮಾಮೂಲು ಕಂಬ ಸಮೀಪಿಸಿದ್ದಾರೆ. ಆದರೆ, ಆದಿನ ಕಂಬದ ಕೆಳಗೆ ಯಾರೋ ಬೂದಿರಾಶಿ ಸುರಿದಿದ್ದಾರೆ. ಅದರ ಮೇಲೆ ಒಂದು ಕತ್ತೆ ಆನಂದವಾಗಿ ಮಲಗಿ ಕನಸು ಕಾಣುತ್ತಿದೆ. (ಬೂದಿರಾಶಿಗೂ ಕತ್ತೆಗೂ ಏನೋ ಅವಿನಾಭಾವ ಸಂಬಂಧ ಇದ್ದೇ ಇದೆಯಲ್ಲವೆ!) ಈಗ ಭಟ್ಟರು ಹೇಗೆ ಇಳಿದಾರು? ಮನೆಯ ಹತ್ತಿರ ಸೈಕಲ್ ಸುತ್ತಿಸಿ ''ಲೇ!!'' ಅಂತ ಕಿರುಚಿದರು. ಆ 'ಲೇ' ಎಲ್ಲಿದ್ದಳೋ ಏನೋ, ಆಕೆಗೆ ಕೂಗು ಕೇಳಿಸಲಿಲ್ಲ. ಭಟ್ಟರು ಎರಡನೇ ಸುತ್ತು ಹಾಕಿಕೊಂಡು ಬಂದು ಕಿರುಚಿದರು. ನಿರುತ್ತರ. ಮೂರನೇ ಸುತ್ತು ಹಾಕಿ ಬಂದರೂ ಕೂಗಿಗೆ ಯಾರೂ ಎದುರಾಗದೆ, ಆದದ್ದಾಗಲಿ ಅಂದುಕೊಂಡು ಕತ್ತೆಯ ಮೇಲೇ ಸೈಕಲ್ ಹಾಯಿಸಿ ಕಂಬ ಹಿಡಿದು ಕೆಳಗಿಳಿದರು. ನಿದ್ರಾಭಂಗವಾದರೆ ಕತ್ತೆ ಸುಮ್ಮನಿದ್ದೀತೇ? ಒಂದೇ ಒಂದು ಒದೆತ, ಭಟ್ಟರಿಗೆ. ನಮ್ಮ ಭಟ್ಟರ ಕಾಲು ಆಗ ಕುಂಟಾಗಿದ್ದು ಈಗಲೂ ಸ್ವಲ್ಪ ಹಾಗೆ ಹಾಗೇ ಅನ್ನುವಂತಿದೆ.

ಒಂದು ಕಾಲಕ್ಕೆ ನಮ್ಮ ಮನೆಯಲ್ಲಿ ಯಾರಲ್ಲೂ ಸೈಕಲ್ ಇರಲಿಲ್ಲ. ಮನೆಗೆ ಬಂದ ಅತಿಥಿಗಳನ್ನು ಉಪಚಾರದಿಂದ ಸ್ವಾಗತಿಸಿ ಒಳಗೆ ಕಳಿಸಿ, ಅವರ ಸೈಕಲಿನ ಮೇಲೆ ನಾವು ಹುಡುಗರು ಎರಡು ಮೂರು ಸುತ್ತು ಹಾಕಿ, ಅದನ್ನು ಅತಿಥಿಗಳು ಇಟ್ಟ ಜಾಗದಲ್ಲೇ ಇಟ್ಟುಬಿಡುತ್ತಿದ್ದೆವು. ಈ ಕಳ್ಳ ಸವಾರಿಯ ಅವಕಾಶ ಸಿಕ್ಕಿದಂದು ನಮಗೆ ಖುಷಿಯೋ ಖುಷಿ.

ಒಂದು ಸಲ ನನ್ನ ನೆರೆಮನೆ ಸ್ನೇಹಿತ ಗೋವಿಂದ ಇಂಥ ಕಳ್ಳ ಸವಾರಿ ಮಾಡಿ ಹಿಂತಿರುಗುತ್ತಿದ್ದ. ಮನೆ ಹತ್ತಿರ ಬರುವಷ್ಟರಲ್ಲಿ ಎದುರಿಗೆ ಎಂದೂ ಬಾರದ ಒಬ್ಬ ಮೊಸರಮ್ಮ ಹಠಾತ್ತಾಗಿ ಎದುರಿಗೆ ಅಡ್ಡಾಳು. ಧಡೂತಿ ದೇಹದ ಆಕೆಯ ತಲೆಯ ಮೇಲೆ ತುಂಬಿದ ಮೊಸರು ಗಡಿಗೆ, ಅದರ ಮೇಲೊಂದು ಅಲ್ಯೂಮಿನಿಯಂ ಬೆಣ್ಣೆ ಪಾತ್ರೆ. ಗೋವಿಂದ ಗಾಬರಿಯಿಂದ ಸ್ವಲ್ಪ ಬಲಕ್ಕೆ ಸೈಕಲ್ ತಿರುಗಿಸಿದ. ಮೊಸರಮ್ಮ ತನ್ನ ಎಡಗಾಲನ್ನು ಮುಂದೆ ಮಾಡಿದಳು. ಇವನು ಎಡಕ್ಕೆ ತಿರುಗಿಸಿದರೆ ಆಕೆ ತನ್ನ ಏಡಗಾಲನ್ನು ಮುಂದಕ್ಕಿಟ್ಟಳು. ಹೀಗೆ ಗಲಿಬಿಲಿಯಲ್ಲಿ ಗೋವಿಂದ ಬ್ರೇಕ್ ಹಾಕಿ ಸೈಕಲ್ ನಿಲ್ಲಿಸುವಷ್ಟರಲ್ಲೇ ಸೈಕಲಿನ ಮುಂದಿನ ಚಕ್ರ ಮೊಸರಮ್ಮನ ಎರಡು ಕಾಲುಗಳ ನಡುವೆ ನುಗ್ಗಿ ಅವಳನ್ನು ಸ್ವಲ್ಪ ದೂರ ಸಾಗಿಸಿ ಕೆಡವಿತ್ತು. ಮೊಸರಿನ ಗಡಿಗೆ ಒಡೆದು, ಕುಕ್ಕರಿಸಿ ಬಿದ್ದಿದ್ದ ಮೊಸರಮ್ಮನ ಮೇಲೆಲ್ಲಾ ಮೊಸರು. ಸೈಕಲ್ ಇನ್ನೊಂದು ದಿಕ್ಕಿಗೆ ಉರುಳಿತು. ಗೋವಿಂದ? ಗೋವಿಂದ! ಮೊಸರಮ್ಮ ಸಾವರಿಸಿಕೊಂಡು ಮಹಾಕಾಳಿಯ ಅವತಾರ ಎತ್ತಿ ಅವನನ್ನು ಹಿಡಿಯುವುದರೊಳಗಾಗಿ ಗೋವಿಂದ ಓಟ ಕಿತ್ತಿದ್ದ. ಎಷ್ಟು ಹುಡುಕಿದರೂ ಕತ್ತಲಾಗುವವರೆಗೂ ಅವನು ಯಾರ ಕಣ್ಣಿಗೂ ಬೀಳಲಿಲ್ಲ. ಸೈಕಲಿನ ಮಾಲೀಕ ಬಂದು ಆ ಮೊಸರಮ್ಮನನ್ನು ಸಮಾಧಾನ ಮಾಡಿ ಮೊಸರು ಗಡಿಗೆ ಹಾಗೂ ಮೊಸರಿನ ಆದ ಖರ್ಚನ್ನು ತಾನೇ ವಹಿಸಿ ಅವಳಿಗೆ ಕೊಟ್ಟು ತಮ್ಮ ಸೈಕಲ್ ಬಿಡಿಸಿಕೊಂಡು ಹೋದರು ಪಾಪ. ಈ ಪ್ರಸಂಗ ನಡೆದ ಕೆಲವು ವರ್ಷಗಳ ತನಕ ಗೋವಿಂದನ ಕನಸಿನಲ್ಲಿ ಆ ಮೊಸರಮ್ಮ ಪ್ರತಿದಿನ ಕಾಣಿಸಿಕೊಳ್ಳುತ್ತಿದ್ದಳಂತೆ. ಆದರೂ ಅವನು ಸೈಕಲ್ ಸವಾರಿ ಮಾಡುವುದನ್ನು ಬಿಟ್ಟಿಲ್ಲ. ಅದರ ಮಜವೇ ಮಜ, ಅನ್ನುತ್ತಿರುತ್ತಾನೆ.

ಈಗಿನ ಸೈಕಲುಗಳ ಹೊರನೋಟವೇ ಬದಲಾಗಿದೆ. ಎಮ್ಮೆ ಗಾತ್ರದ ಚಕ್ರಗಳು, ಎಮ್ಮೆ ಕೊಂಬುಗಳ ಹಾಗೆ ಹಿಡಿ, ಮಹಿಷಾಸುರನ ನೆನಪನ್ನು ತರುತ್ತವೆ. ಬೆಲೆಗಳೋ ಗಗನಕ್ಕೇರಿವೆ. ಈಗಿನ ಟ್ರಾಫಿಕ್ ನಡುವೆ ಸೈಕಲ್ ಸವಾರಿ ಮಾಡುವುದೇ ಒಂದು ಭಯಂಕರ ಅನುಭವ. ಯಾರೂ ಉಪಯೋಗಿಸದೆ ನನ್ನ ಸೈಕಲ್ ಮೂಲೆಯಲ್ಲಿ ಬಿದ್ದಿದೆ. ಇಷ್ಟರಲ್ಲೇ ಗೋವಿಂದನ ಅರವತ್ತನೇ ಹುಟ್ಟಿದ ಹಬ್ಬ ಬರುವುದಿದೆ. ಆ ಸಮಯಕ್ಕೆ ಅದನ್ನು ಅವನಿಗೆ ಕೊಟ್ಟುಬಿಡೋಣ ಅಂದುಕೊಂಡಿದ್ದೇನೆ.

★★★

ಪುಸ್ತಕ ಪರಿಚಯ

ಕೈಲಾಸಂ ಮತ್ತು ನಾನು - ರಾಶಿ

ಕನ್ನಡಕ್ಕೆ: ಜಿ.ಎನ್. ರಂಗನಾಥರಾವ್

ಕೈಲಾಸಂ ಅವರನ್ನು ನಿಕಟವಾಗಿ ಬಲ್ಲ ಡಾ|| ಶಿವರಾಂ (ರಾಶಿ) ಕೈಲಾಸಂ ಅವರೊಂದಿಗೆ ತಮ್ಮ ಸಂಪರ್ಕವನ್ನು ಸಮರ್ಥವಾಗಿ, ಸ್ವಾರಸ್ಯವಾಗಿ ಇಂಗ್ಲಿಷ್‌ನಲ್ಲಿ Kailasam and I ಎಂಬ ಪುಸ್ತಕದಲ್ಲಿ ದಾಖಲಿಸಿರುವುದನ್ನು ಅನೇಕರು ಓದಿರಲಿಲ್ಲ. ಈಗ ಜಿ.ಎನ್. ರಂಗನಾಥರಾವ್ ಅವರ ಅನುವಾದ ಕಾರ್ಯದಿಂದ ಅದು ಹೆಚ್ಚು ಕನ್ನಡಿಗರಿಗೆ ಲಭ್ಯವಾಗಿದೆ. ಪುಸ್ತಕ ಬರೆಯಲು ಪರೋಕ್ಷವಾಗಿ ಪ್ರೇರೇಪಿಸಿದ ಕಣ್ಣಿನ ವೈದ್ಯ ಡಾ|| ಎಂ.ಎಸ್. ಮೇಕ್ರಿಯವರಿಗೆ ಪುಸ್ತಕವನ್ನು ರಾಶಿಯವರು ಅರ್ಪಿಸಿ ಬರೆದಿರುವ ಮಾತುಗಳು ಹೀಗಿವೆ. ''ನನ್ನ ಕಣ್ಣಿಗೆ ಶಸ್ತ್ರಚಿಕಿತ್ಸೆ ನಡೆಸಿ ನನ್ನ ಎರಡು ಕಣ್ಣುಗಳಿಗೂ ಪಟ್ಟಿ ಕಟ್ಟಿ ಸಂಪೂರ್ಣ ದೃಷ್ಟಿಹೀನನನ್ನಾಗಿ ಮಾಡಿದಿರಿ. ಆಮೇಲೆ ನನ್ನನ್ನು ಹಾಸಿಗೆಯಲ್ಲಿ ಅಸಹಾಯಕನನ್ನಾಗಿ ಬಿಟ್ಟು ಹೋದಿರಿ. ಕೆಲವು ಗಂಟೆಗಳಲ್ಲಿ ಅಂಗಾತ ಬಿದ್ದ ಜಿರಳೆಯಂತೆ ನನಗನ್ನಿಸಿತು. ಜಿರಳೆ ರೋಷಾವೇಷದಿಂದ ಕಾಲುಗಳನ್ನು ಅಲುಗಾಡಿಸುತ್ತದೆ. ಆದರೆ ಮುಂದೆ ಸಾಗುವುದಿಲ್ಲ. ಹಳೆ ನೆನಪುಗಳನ್ನು ಬರಮಾಡಿಕೊಂಡೆ. ನನ್ನನ್ನು ಪ್ರಭಾವಕ್ಕೆ ಎಳೆದುಕೊಂಡ ಕೈಲಾಸಂ ಬಗ್ಗೆ ನೆನಪುಗಳನ್ನು ದಾಖಲಿಸಿ ಅವರ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದೇನೆ... ನನ್ನನ್ನು ಈ ಪುಸ್ತಕ ಬರೆಯುವ ನಿರ್ಬಂಧದಲ್ಲಿ ಸಿಲುಕಿಸಿದಿರಿ. ಪ್ರತೀಕಾರವಾಗಿ ನಾನು ಈ ಪುಸ್ತಕವನ್ನು ನಿಮಗೆ ಅರ್ಪಿಸುತ್ತಿದ್ದೇನೆ'' ಎಂತಹ ಹಾಸ್ಯಭರಿತವಾದ ಅರ್ಪಣೆ! ಓದುಗರಿಗೆಲ್ಲಾ ಡಾ|| ಮೇಕ್ರಿ ಅವರಿಗೆ ಋಣಿಯಾಗಿರಬೇಕು. ಆಪರೇಷನ್ ಮಾಡಿ ಕಣ್ಣಿನ ದೃಷ್ಟಿ ಬರಿಸುವುದಲ್ಲದೆ ಒಳಗಣ್ಣಿನ ನೋವನ್ನು ಹೊರತೆಗೆದು ಬಹಳ ಮುಖ್ಯವಾದ ಘಟನೆಗಳನ್ನು ರಾಶಿ ಮೂಲಕ ಮಾಡಿ ಹೇಳಿಸಿದ್ದಾರೆ.

ಅನುವಾದ ಆತ್ಮೀಯತೆಯನ್ನು ಉಳಿಸಿಕೊಂಡಿದೆ. ಚಿಕ್ಕವರನ್ನು ತಮ್ಮ ಜೊತೆಗಾರರನ್ನಾಗಿ ಮಾಡಿಕೊಂಡು ಅವರನ್ನು ತನ್ನ ನಡುವಳಿಕೆಯಿಂದ

ತಿದ್ದುವುದು, ಕೈಲಾಸಂ ಹಾಗೂ ರಾಶಿ ನಡುವೆ ನಡೆದ ಒಂದು ಸಂಭಾಷಣೆಯಲ್ಲಿ ಅದಕವಾಗಿದೆ. ತಾಯಿ ಮತ್ತು ಮಗಳನ್ನು ನೋಡಿ ಯುವಕ ಶಿವರಾಂ ಪ್ರತಿಕ್ರಿಯಿಸಿದಾಗ ಅವರನ್ನು ತಿದ್ದುವ ರೀತಿ ವಿಚಿತ್ರವಾದದ್ದು. ''ಅವರು ಯಾರು ಗೊತ್ತಾ? ನನ್ನ ಹೆಂಡತಿ ಮತ್ತು ಮಗಳು'' ಎಂದು ಸುಳ್ಳು ಹೇಳಿದ್ದು. ಸತ್ಯಾಂಶ ರಾಶಿಗೆ ಗೊತ್ತಾದುದು ಕೈಲಾಸಂ ಮನೆ ''ವೈಟ್ ಹೌಸ್''ಗೆ ಹೋದಾಗ ಮಾತ್ರ. ಅದರ ಬಗ್ಗೆ ಮತ್ತೆ ಮಾತಾಡಲಿಲ್ಲ. ಶಿವರಾಂಗೆ ಕೈಲಾಸಂ ಏಕೆ ಹಾಗೆ ಹೇಳಿದರು ಎಂದು ಅರ್ಥವಾಗಿ ಹೋಯಿತು. ಇಂತಹ ಅನುಕರಣೀಯ ನಡತೆಯಿಂದ ತಿಳಿಯಬೇಕಾದ ಮೌಲ್ಯಗಳ ಪ್ರತಿಪಾದನೆ ರಾಶಿಯವರ ನೇರ ಮಾತುಗಳಲ್ಲಿ ಸ್ಪಷ್ಟ.

ಕೈಲಾಸಂ ಡಾ। ಶಿವರಾಂ ಮನೆಯಲ್ಲಿ ಉಳಿದ ಸಂದರ್ಭ ಹಾಗೂ ಕೈಲಾಸಂ ತನ್ನ ತಾಯಿಯ ಶ್ರಾದ್ಧವನ್ನು ಆಚರಿಸಿದ ರೀತಿ ಅದರ ನಿರೂಪಣೆ ಕೈಲಾಸಂ ಅವರ ವ್ಯಕ್ತಿತ್ವದ ಇನ್ನೊಂದು ಚಿತ್ರಣ ಕೊಡುತ್ತದೆ. ರಾಶಿಯವರ ವಿನೋದ ಪ್ರಜ್ಞೆಯನ್ನು ಗುರುತಿಸಿ ಮನಃಪೂರ್ವಕವಾಗಿ ಕೈಲಾಸಂ ಹೊಗಳಿದ್ದು ಹೀಗೆ '... ಪೋಲಿಕಿಟ್ಟಿ ಥರಾ, ನಿನ್ನೊಳಗೆ ಜುಳುಜುಳು ಹರಿಯುವ ವಿನೋದ ಪ್ರಜ್ಞೆ ಇದೆ ಎಂದು ನನಗನಿಸುತ್ತದೆ. ನೋಡು ಆ ಉಲ್ಲಾಸದಾಯಕವಾದ ಪ್ರಾಸವನ್ನು ಜ್ಞಾಪಿಸಿಕೊಳ್ಳುವುದು ಅದೂ ಸೂಕ್ತವಾದ, ತಕ್ಕ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುವುದು ನಿನಗೆ ಸಾಧ್ಯವಾಯಿತು..' ಈ ಮಾತಿನಲ್ಲಿ ಹಾಸ್ಯ ವೃತ್ತಿಯಿರುವವರನ್ನು ಗುರುತಿಸುವ ಸೂಕ್ಷ್ಮ ಲಕ್ಷಣಗಳನ್ನು ಕೈಲಾಸಂ ಹೇಳಿದ್ದಾರೆ.

ಘಟನೆಗಳು ಹಾಗೂ ವ್ಯಕ್ತಿಚಿತ್ರಣಗಳು ಜನಗಳ ವಿಚಿತ್ರ ಸ್ವಭಾವ ಇತ್ಯಾದಿಗಳನ್ನು ಒಳಗೊಂಡ ಈ ಪುಸ್ತಕ ಮತ್ತೆ ಮತ್ತೆ ಓದುವಂತಹ ಪುಸ್ತಕ. ಕೈಲಾಸಂ ಬಗ್ಗೆ ಎಷ್ಟು ವಿಚಾರಗಳು ವಿಷಯಗಳು ಇದೆಯೋ ಅಷ್ಟೇ ನಮಗೆ ರಾಶಿಯವರ ಜೀವನ, ಅವರ ದೃಷ್ಟಿಕೋನ ಹಾಗೂ ಜೀವನದ ಬಗ್ಗೆ ವಿವರವಾದ ಚಿತ್ರಣ ಲಭ್ಯ.

ಪುಸ್ತಕವನ್ನು ಹೊರತಂದ ಪ್ರಿಸಮ್ ಬುಕ್ಸ್ ಪ್ರೈ. ಲಿ. ಅವರಿಗೆ ಕೈಲಾಸಂ ಹಾಗೂ ರಾಶಿ ಪ್ರಿಯರೆಲ್ಲಾ ಧನ್ಯರು.

– ಕೃಷ್ಣ ಸುಬ್ಬರಾವ್

ಶಾಪದ ಕೋಣೆ

– ಕಮಲಾ ರಾಮಸ್ವಾಮಿ

ನಮ್ಮನೆ ಬೆಡ್‌ರೂಂನಲ್ಲಿ ಒಂದು ಮೂಲೆ ಇದೆ, ಅದಕ್ಕೇನು ಶಾಪವೋ ಕಾಣೆ - ಯಾವಾಗ್ಲೂ ಏನಾದ್ರೂ ಹೇರಿರಲೇಬೇಕು ಅಲ್ಲಿ. ಆ ಜಾಗಾನೂ ಹಾಗೇ ಇದೆ ಹಾಳದ್ದು - ಹಾಲಿನಲ್ಲಿ ಕೂತವರಿಗೆ ಸರ್‍ಯಾಗಿ ಕಾಣುವ ಹಾಗೆ ಎಷ್ಟೇ ಖಾಲಿ ಮಾಡಿದ್ರೂ, ಅದ್ಯಾಗ್ಗೆ ಮುನಿಸಿಪಾಲ್ಟಿ ಕಸದ ಡ್ರಂ ತರಹ ತುಂಬಿ ತುಳುಕುತ್ತೆ! ಎಷ್ಟೇ ಕರ್ಟನ್ ಮುಚ್ಚಿ ಓಡಾಡಿದ್ರೂ, ಸ್ವಲ್ಪ ಕರ್ಟನ್ ಸರಿದ್ರೂ ಸಾಕು! ದರ್ಶನ. ಬಂದು ಕೂತವರಿಗೋ ಮಹಾ ಕುತೂಹಲ, ಇಣುಕಿ ನೋಡುವುದು, ಯಾಕೆ ಹೀಗೆ ಕರ್ಟನ್ ಹಾಕಿಕೊಂಡೇ ಓಡಾಡ್ತಾರೆ ಎಂಬ ಆತಂಕ! ಕೆಲಸವರಂತೂ, ನಾನು ಆ ಕಡೆ ಈ ಕಡೆ ಹೋದಾಗ ಎದ್ದು ಹೋಗಿ ನೋಡಿದ್ದೂ ಉಂಟು! ಆ ಜಾಗ ಖಾಲಿ ಮಾಡಲು ಮಾಡಿದ ಪ್ರಯತ್ನವೆಲ್ಲಾ ನೀರಿನಲ್ಲಿ ಹೋಮ! ಆ ಮೂಲೇಲಿ ಒಂದು ಅಲಂಕಾರಿಕ ವಸ್ತು ಇಟ್ಟರೆ ಹೇಗೆ? ''ಕಾವೇರಿ'' ಹ್ಯಾಂಡೀಕ್ರಾಫ್ಟ್‌ನಿಂದ ತುಂಬಾ ಅಂದವಾಗಿದ್ದ ಒಂದು ಕಸದ ಬುಟ್ಟಿ ತಂದಿಟ್ಟೆ. ಮತ್ತೆ ಅದೇ ಕಥೆ! ಬುಟ್ಟಿ treasure Hunt ಆಗಿಬಿಡ್ತು. ಏನು ಕಾಣೆಸಿದೆ ಇದ್ರೂ ಗದ್ಲಕ್ಕೆ ಅದನ್ನು ಉರುಳಿಸಿ ನೋಡಿ ಅವರಿಗೆ ಬೇಕಾದ ಕಾಲುಚೀಲ, belt, magazine, ಬಾಚಣಿಗೆ ಇತ್ಯಾದಿ, ಇತ್ಯಾದಿ ತರಹೇವಾರಿ ಸಾಮಾನು ತೆಗೆದುಕೊಂಡು ಹೋಗಿಬಿಡುತ್ತಿದ್ದರೆ, ಆ ಮೇಲೆ ಬುಟ್ಟಿ ಖಾಲಿ ಮಾಡೋ ಕೆಲ್ಸ ನಂದು. ಬುಟ್ಟಿ ತೆಗೆದು ಸಣ್ಣ ಟೀಪಾಯ್, ಅದರ ಮೇಲೊಂದು ಫ್ಲವರ್ ವೇಸನ್ನು ಇಟ್ಟೆ. ಸುಂದರವಾಗಿ ಕಂಡಿತು. ಆದ್ರೆ ಎರಡೇ ದಿನ! ಯಥಾ ಪ್ರಕಾರ ಸಾಮಾನು ಹೇರಾಟ! ಇದರ ಹಣೇ ಬರಹಾನೇ ಇಷ್ಟು ಎಂದು ಕೈಬಿಟ್ಟು ಕುಳಿತೆ.

ಹೀಗೆಯೇ ಇದ್ದಾಗ, ಒಂದು ದಿನ ಬೆಳಿಗ್ಗೆ ಶ್ರೀದೇವಿಯಿಂದ ಕಾಗದ ಬಂತು. Film star ಶ್ರೀದೇವಿ ಅಂದ್ಕೊಂಡ್ರಾ! ಅಲ್ಲ, ನನ್ನ ತಮ್ಮನ ಹೆಂಡತಿ ಶ್ರೀದೇವಿ ಅಮೇರಿಕಾದಿಂದ ಬರೆದಿದ್ದಳು. ''ತಂದೆಗೆ ಹುಷಾರಿಲ್ಲ ಆದ್ದರಿಂದ ಮೈಸೂರಿಗೆ ಹೊರಟಿದ್ದೇನೆ, ತೌರಿಗೆ ತೆರಳುವ ಮುನ್ನ ನಿಮ್ಮನೇಲಿ ಎರಡು ದಿನವಿದ್ದು ಹೊರಡುತ್ತೇನೆ. Bombay ತಲುಪಿದ ತಕ್ಷಣ ಫೋನ್ ಮಾಡುತ್ತೇನೆ. Airportಗೆ ಬನ್ನಿ'' ಎಂದು ಬರೆದಿದ್ದಳು.

ಸಂಜೆ ಕಾಲೇಜಿನಿಂದ ಬಂದು ಮೂರು ಮಕ್ಕಳ ಮುಂದೆ ಕಾಗದ ಓದಿದೆ: ಎಲ್ಲರೂ ಸಣ್ಣಗೆ ''ಓ'' ''ಹಾಯ್'' ''ಅಮ್ಮಾ'' ಅಂತ ಚೀರಿದರು. ಯಾಕೆ ಅಂತ ಕೇಳ್ತೀರಾ! ನಂ ಶ್ರೀದೇವಿ ಅಂತ ಹೆಣ್ಣನ್ನು ಇದುವರೆಗೂ ನಾನು ನೋಡಿಲ್ಲ ಮಹಾ ಚುರುಕು, ಅಸಾಧ್ಯ ಕ್ಲೀನು! ಅವಳ ಮನೆ ಕನ್ನಡಿ ಹಾಗಿರುತ್ತೆ. ಅಡಿಗೆ ಊಟದಲ್ಲಿ ಅಚ್ಚುಕಟ್ಟು, ರುಚಿ, ಶುಚಿ ಎಲ್ಲಾದ್ರಲ್ಲೂ A-1 ರೂಪಿನಲ್ಲಂತೂ ಒಳ್ಳೆ model ಇದ್ದ ಹಾಗೆ ಇದ್ದಾಳೆ. ಮಾತಿನಲ್ಲಿ, ಆಟದಲ್ಲಿ ಎಲ್ಲಾದ್ರಲ್ಲೂ ಬಲು ಜಾಣೆ! ಅವಳು ಮನೇಗೆ ಬರುತ್ತಾಳೆಂದ್ರೆ ಎಲ್ಲರಿಗೂ ಸುಸ್ತು.

ಹುಡುಗರೆಲ್ಲಾ ಸೇರಿ ವೀಕ್ ಎಂಡ್ ಎಲ್ಲೂ ಹೋಗ್ದೆ ಮನೆ ಕ್ಲೀನ್ ಮಾಡಿದ್ರು. ಆ ಮೂಲೇದೇ ಯೋಚನೆ ಆಗಿತ್ತು. ಸಧ್ಯ! ಮಕ್ಕಳು, ಗಂಡ ಎಲ್ಲಾ Co-operate ಮಾಡಿದ್ದರಿಂದ ಮೂಲೆ ಕಸ ಹೋಯ್ತು.

ಶ್ರೀದೇವಿ ಬಂದ್ಲು. ಮಾತು, ಕಥೆ, ನಗು, ಹಾಸ್ಯ ಇದರಿಂದ ಮನೆ ತುಂಬಿದ ಹಾಗಿತ್ತು. ನಗು ಸರಸಿ, ಸ್ನೇಹಮಯಿ ಶ್ರೀದೇವಿ ಮನೆಯಲ್ಲಿದ್ದರೆ ಹತ್ತು ಜನ ಇದ್ದಹಾಗೆ. ಎರಡು ದಿನ ಕಳೆದಿದ್ದೇ ಗೊತ್ತಾಗಲಿಲ್ಲ. ಅವಳು ಮದ್ರಾಸು, ಬೊಂಬಾಯಿಯಲ್ಲಿದ್ದಾಗ ಹೋಗಿ ಬಂದು ಮಾಡುತ್ತಿದ್ದೆವು. ಈಗ ಅಮೇರಿಕಾಗೆ ಹೋಗಿ ಎರಡು ವರ್ಷವಾಗಿತ್ತು. ಅಂದಮೇಲೆ, ಮಾತಿಗೆ, ಹರಟೆಗೆ ಪುರುಸೊತ್ತು ಎಲ್ಲಿ? ಮೂರನೇ ದಿನ ಶ್ರೀದೇವಿ Shopping ಗೆ ಹೋಗಿ ಮಧ್ಯಾನ್ಹ ಬಂದಳು. ಬಟ್ಟೆ ಬದಲಾಯಿಸಲು ರೂಮಿಗೆ ಹೋದಳು ಹಿಂದಿರುಗಿ ಬಂದಳು.

''ಅತ್ತಿಗೇ, ನಿಮ್ಮನೇಲಿ ಎಲ್ಲೂ ''ಕೋಲೆಬಸವ'' ಆಗ್ಲಿ ""Devil Corner" ಆಗ್ಲಿ ಕಾಣಿಸಲೇ ಇಲ್ಲ! ಅದನ್ನೆಲ್ಲಾ ಎಲ್ಲಿಟ್ಟಿದ್ದೀರಿ?''

ಆ ಹೆಸರುಗಳನ್ನು ಕೇಳಿದ ನಂಗೆ ಆಶ್ಚರ್ಯ! ''ಹಾಗಂದ್ರೇನು?'' ಎಂದೆ.

''ಅದೇ ಎಲ್ಲಾರ ಮನೆಲೂ ಒಂದು ಬಟ್ಟೆ stand ಇಟ್ಟಿರ್ತಾರೆ. ದಿನಾ ಬದಲಾಯಿಸೋ ಬಟ್ಟೆ, ಸಣ್ಣ ಪುಟ್ಟ ಟವಲು, ಬೇಕಾದ ಬಟ್ಟೆ ಬರೆ ಅದರ ಮೇಲೆ ಹೇರಿರ್ತಾರೆ ಅದನ್ನ ''ಕೋಲೆಬಸವ'' ಅಂತ ಕರೀತೀನಿ. ಹಾಗೆ ಹಾಳೂ, ಮೂಳೂ, ಹೇರ್‌ಪಿನ್, ಬಾಚಣಿಗೆ, ಅಲ್ಲಿ ಇಲ್ಲಿ ಬಿದ್ದಿದ್ದಾಗ ಎತ್ತಿ ಒಂದು ಬುಟ್ಟಿಗೆ ಹಾಕಿ ಒಂದು ಮೂಲೇಲಿ ಇಡ್ತೀವಲ್ಲಾ ಆ ಮೂಲೇನಾ Devils Corner ಅಂತೀನಿ. ಎರ್ಡೂ ನಿಮ್ಮನೇಲಿ ಕಾಣಿಸಲಿಲ್ವೇ?...

ಅವಳ ಮಾತು ಮುಗಿಸುವ ಮುನ್ನವೇ 'ಗೊಳ್' ಎಂದು ನಕ್ಕೆ.

ಗೀತಾಸ್ನಾನಂ

– ಎಂ.ವಿ.ನಾ.

''ಹಟ್‌ಗಯಿ ಲೋ ಖಾಲಿ ಫಟಾ''.... ''ನಾಚ್ಚೋ ನಾಚ್ಚೋ ಪ್ಯಾರೇ'' ..... ''ಏ ಕೈಸಾ ಅನ್ಯಾಯ ಹಾತಾ''... ''ಹಹ್ಹಾ... ಹಹ್ಹಾ''.... ಬಹಾರ್.... ಅಬ್ ಆ...'' ''ತೂ ಕ್ಯಾ ... ಹೇಖ್ ನ ವಾಯಾ...'' ''ಹರಿ ಕೊಟ್ಟ ಕಾಲಕ್ಕೆ...'' ತರ ನ ನ ನಾ...'' ''ಮಿಲ್‌ಗಯೀ... ಈ... ಈ... ''ತೋಂ... ನೊಂ...'' ಮುಸುಕಿದೀ ಮಬ್ಬಿನಲಿ....''

ನಮ್ಮ ಹಾಸ್ಟಲು ಬಚ್ಚಲು ಮನೆಯ ಶಬ್ದ ವಿಚಿತ್ರ ನಾನು ಈಗ ನಿಮ್ಮ ಕಿವಿ ಮುಂದೆ ಹಿಡಿದಿದ್ದು ಮುಂಜಾನೆ ಆರು ಘಂಟೆಗೆ ಪ್ರಾರಂಭವಾಗಿ - ಒಂಭತ್ತು ಗಂಟೆಯವರೆಗೂ ಲೀಲಾಜಾಲವಾಗಿ ಸಂಗೀತ ಸಮಾರಾಧನೆ ದಿನಂ ಪ್ರತಿ ನಡೆಯುತ್ತದೆ. ಅದೊಂದು ವಿಚಿತ್ರ ಸಮಾರಾಧನೆ ಅನ್ನಿ. ಬಗೆ ಬಗೆಯ ಶಾರೀರಗಳಿಂದ ಹೊರಹೊಮ್ಮಿ ಚಿಮ್ಮುವ ವಿವಿಧ ಗಾನಗಳು. - ಸರಾಗವಾಗಿ ಸ್ನಾನದ ಮನೆಗಳಿಂದ ಮೇಲೇಳುವ ಹಬೆಯೊಂದಿಗೆ ಮೇಲ್ಫೊರಟು, ದಿಗಂತವನ್ನು ಭೇದಿಸುತ್ತ ಗಗನದಲ್ಲಿ ಮೇಳಯಿಸುತ್ತವೆ - ಅದೊಂದು ಸಮೂಹ ಶಾರೀರ ಗಾನ.

ಅದೇನೋ ನೋಡಿ, ಸಂಗೀತಕ್ಕೂ ಬಚ್ಚಲು ಮನೆಗೂ ಗಂಟು - ನನಗನ್ನಿಸುತ್ತೆ ಆಗಾಗ - ಇವತ್ತು ಯಾರು ಯಾರು ಸಂಗೀತದ ದಿಗ್ದಂತಿಗಳಾಗಿದ್ದಾರೋ ಅವರೆಲ್ಲರೂ, ಸಾಧನೆ ಮಾಡಿದ್ದು ಬಚ್ಚಲು ಮನೆಯಲ್ಲಿರಬೇಕು ಅಂತ. ಇರಬೇಕೇನು... ನಿಜ ಅನ್ನಿ. ಬಚ್ಚಲು ಮನೆ ಸಂಗೀತಕ್ಕೆ ಕರ್ಮಭೂಮಿ, ಕ್ರಿಯಾಭೂಮಿ. ಅಲ್ಲಿ ಪಳಗದ ಕಂಠಗಳೂ, ಅಲ್ಲೂ ಧೈರ್ಯವನ್ನು ತಾಳದ ಶಾರೀರಗಳು ಎಂದಿಗೂ ಹಾಡಲಾರವು.

ಅದರಲ್ಲೂ ಹಾಸ್ಟಲು ಬಚ್ಚಲು ಮನೆಗಳೆಂದರೆ - ಅದೇ ಒಂದು ಜೋಕು. ಒಂದು ದಿನ ಬೆಳಿಗ್ಗೆ ಬಂದು ಕೇಳಿ... ಕೆಲವು ಕಂಠಗಳು - ಹಳೆ ಹುಲಿಗಳವು ಧೈರ್ಯವಾಗಿ ರಾರಾಜಿಸುತ್ತಾ ಹಾಡುತ್ತಿರುತ್ತವೆ. ಹಾಸ್ಟಲಿನಲ್ಲಿ ಹಳೆ ಹುಲಿ ಅಂದರೆ ಇದೊಂದು ಸ್ವಾತಂತ್ರ್ಯ. ಇತರರೆಲ್ಲಾ ಇನ್ನೂ ಚಿಕ್ಕ ಚಿಕ್ಕ ಹುಡುಗರು. ಇವರ ಕಣ್ಮುಂದೆ ಹಾಸ್ಟಲಿಗೆ ಕಾಲಿಟ್ಟವರು ಹಾಸ್ಟಲಿನಲ್ಲಿ ದಂಡ ಪಿಂಡ ತಿಂದಷ್ಟೂ ಒಂದು ಬಗೆಯ ಗತ್ತು, ಹೆಮ್ಮೆ, ಹಿಂದು ಬರುತ್ತದೆ... ಇನ್ನೂ ಸ್ವಲ್ಪ ಹತ್ತಿರ ಹೋಗಿ... ಕೆಲವಾರು ಧ್ವನಿಗಳು ಕಿರುಧ್ವನಿಯಲ್ಲಿ ತಮ್ಮದೇ ಆದ ಶೈಲಿಯಲ್ಲಿ

ಹಾಡುತ್ತಿರುತ್ತವೆ. - ಕೆಲವು ಇನ್ನೂ ಹೊಸ ಕಂಠಗಳು - ಇತರರನ್ನು ಕೇಳಿ ಕೇಳಿ ಸಹಿಸಲಾರದೆ, ತಮ್ಮದೂ ಒಂದಿರಲಿ ಅಳಿಲ ಸೇವೆ ಅಂತ ಹಾಡುವುದಕ್ಕೆ ಪ್ರಾರಂಭಿಸಿವೆ. ಆದರೂ ಧೈರ್ಯ ಸಾಲದು. ಅಂದ ಮಾತ್ರಕ್ಕೆ ಸುಮ್ಮನೆ ಕೂತರೆ ಹಾಡುವುದಕ್ಕೆ ಬರುತ್ತದೆಯೇ... ಆದ್ದರಿಂದ ಕಿರುದನಿಯಲ್ಲೇ ಅಧೈರ್ಯದಿಂದಲೇ ಹಾಡುತ್ತಿರುತ್ತವೆ. ಮತ್ತೆ ಕೆಲವು ಕಂಠಗಳು ಹಾಸ್ಟಲಿಗೆ ಹೊಸದು ಅಷ್ಟೆ ಮನೆಯ ಬಚ್ಚಲಲ್ಲೇ ಸರಳ ವರಸೆಗಳನ್ನು ಕಲಿತಿರುತ್ತವೆ. ಹಾಸ್ಟಲಿಗೆ ಬಂದು ಇತರ ಗೆಳೆಯರ ಕಂಠಗಳೊಂದಿಗೆ ಸೇರಿ ಜಂಟಿ ವರಸೆ ಅಭ್ಯಾಸ ಮಾಡಲು ಪ್ರಯತ್ನ ಮಾಡುತ್ತಿರುತ್ತವೆ. ಆದರೂ ಧೈರ್ಯ ಸಾಲದು; ಬಿಗುಮಾನ; ಬಿಂಕ ಎಲ್ಲಾದರೂ ಯಾರಾದರೂ ಹಾಸ್ಯ ಮಾಡಿಯಾರೋ ಎಂಬ ಹೆದರಿಕೆ ಒಂದು ಕಡೆ ಹಾಸ್ಯ ಹಾಗಿರಲಿ, - ಹಾಗೇ ಅಡ್ಡ ಹೆಸರಿಟ್ಟಾರೋ ಅಂತ ಹೆದರಿಕೆ. ನಮಗ್ಯಾಕಪ್ಪಾ ಈ ತಾಪತ್ರಯ ಇರೋದು ಒಂದೋ ಎರಡೋ ವರ್ಷ... ಅವರಿವರ ಹತ್ರ ಯಾಕೆ ಜಗಳ ಅಂತ ಒಂದು ಕಡೆ ಮನಸ್ಸು. ಆದರೆ ಮನಸ್ಸು ಸುಮ್ಮನಿರುತ್ತದೆಯೇ ಮನಸ್ಸು ಸುಮ್ಮನಿದ್ದರೂ ಕಂಠ ಸುಮ್ಮನಿರುತ್ತದೆಯೇ ಸಂಗೀತಕ್ಕೆ ಸರಿಯಾದ ವಾತಾವರಣ ಸಿಕ್ಕಿತು ಅಂದರೆ, ಅವರಿಗೆ ಗೊತ್ತಿಲ್ಲದೆಯೇ, ಹಾಡಲು ಪ್ರಾರಂಭಮಾಡುತ್ತದೆ. ಇನ್ನೂ ಹೊಸದಾದ್ದರಿಂದ ನಾಚಿಕೆ - ಆದರೆ ''ಎಳಗರು ಎತ್ತಾಗದೇ'' ಹಾಗೆಯೇ ಇವೂ ಒಂದಾನೊಂದು ಕಾಲದಲ್ಲಿ ಧೈರ್ಯದಿಂದ ಗಗನವನ್ನು ಭೇದಿಸುವುದರಲ್ಲಿ ಸಂದೇಹವಿಲ್ಲ.

ಇನ್ನು ಕೆಲವು ಶಾರೀರಗಳಿವೆ. ಅವಕ್ಕೆ ಒಂದು ಬಗೆಯ ಮೊಂಡು ಧೈರ್ಯ. ಇತರರನ್ನು ಹಾಡುವುದನ್ನು ಕೇಳಿಯೇ ಈ ಧೈರ್ಯ ಅನೇಕ ಸಲ ಬರುತ್ತೆ. ''ನಾನೇನು ಕಡಿಮೆ - ಅಂತ, ಅಹಂಭಾವವೇ ಇದಕ್ಕೆ ಮೂಲಕಾರಣ ಆದರೂ ಆಗಾಗ, ಬಚ್ಚಲು ಮನೆಯ ಗೋಡೆಗಳಿಂದ ತಮ್ಮ ಸಂಗೀತವೇ ಪ್ರತಿಧ್ವನಿತವಾದಾಗ ನಾಚಿಕೆಯಿಂದ ಧ್ವನಿ ಕುಗ್ಗುತ್ತದೆ ಇದು ಕ್ಷಣಕಾಲ ಮಾತ್ರ ದೇವರು ಒಂದು ಉಪಕಾರ ಮಾಡಿದಾನೆ ನೋಡಿ ಬುದ್ದಿ ತುಂಬದ ತಲೆಗೆ ಎಲ್ಲಾಕೊಟ್ಟು ಮರೆವು ಅನ್ನೋದು ಒಂದು ಕೊಡದೇ ಹೋಗಿದ್ರೆ ಕೆರೆಕೊಳಗಳಲ್ಲೆಲ್ಲಾ ಹೆಣಗಳು, ಊರೆಲ್ಲಾ ಹುಚ್ಚಾಸ್ಪತ್ರೆ ಆಗುತ್ತಿತ್ತು ಈ ಕಂಠಗಳೂ ಹಾಗೆಯೇ ಕೂಡಲೇ ಮರೆತು ಮತ್ತೆ ಇಮ್ಮಡಿಯಾಗಿ ಹಾಡುತ್ತವೆ.

ಕೆಲವು ಬಚ್ಚಲು ಮನೆಗಳಿಂದ ಕೆಲವು ಘಂಟಾನಾದಗಳು ಗುಡುಗುತ್ತಾ ಸಿಡಿಲಿನಂತೆ ಬಡಿಯುತ್ತಾ, ಗೋಡೆಗಳನ್ನು ಭೇದಿಸಿಕೊಂಡು ಬರುತ್ತವೆ. ಗಂಟಲು ಕೆರೆದುಕೊಂಡು ಜಗಳಕ್ಕೆ ಬಂದ ಹಾಗಿರುತ್ತವೆ ಅವುಗಳ ಸಂಗೀತ. ಇಂತಹ ಎರಡು ಸೇರಿದರೆ ಸಂ.... ಬಿರುಗಾಳಿ ಏಳುತ್ತವೆ.

ಇಷ್ಟೆಲ್ಲಾ ಅಂದೆ ಅಂತ ಒಳ್ಳೆಯ ಕಂಠಗಳೇ ಇಲ್ಲವೇ ಅಂದು ನೀವು ನಿರಾಶರಾಗಬೇಡಿ - ಸಿರಿಗನ್ನಡದ ಗತವೈಭವದ ಕುರುಹುಗಳು ಇನ್ನೂ ಕೆಲವು ಶಾರೀರಗಳಲ್ಲಿವೆ. ಆದರೆ, ಈ ಗೀತಾಂದೋಲನದಲ್ಲಿ ಸಿಕ್ಕಿಕೊಂಡು, ಗುಂಪಿನಲ್ಲಿನ ಗೋವಿಂದನ ಅವಸ್ಥೆಗೆ ಒಳಗಾಗಿ, ಮೊದಲು ಧೈರ್ಯವಾಗಿ ಮೊದಲಾದರೂ, ಕೊರಗಿ ಸೊರಗಿ, ಕಡೆಗೆ ಮುಳುಗಿ ಹೋಗುತ್ತವೆ.

ನಾನು ಸ್ನಾನದ ಮನೆಗೆ ಹೋಗಿ, ಗೀತಾಸಾಧನೆ ಮಾಡಿದಾಗಲೆಲ್ಲಾ, ನಾನೂ, ಅವುಗಳೊಂದಿಗೆ ನನಗೆ ಅರಿವಿಲ್ಲದೆ, ನನ್ನ ಶಾರೀರವನ್ನೂ ಮೇಳಯಿಸಿದಾಗಲೆಲ್ಲಾ - ನನಗೆ ಈ ಪ್ರಶ್ನೆ ಮತ್ತೆ ಮತ್ತೆ ತಲೆದೋರಿದೆ - ಸಂಗೀತಕ್ಕೂ ಸ್ನಾನಕ್ಕೂ ಸಂಬಂಧವೇನು. ಹೊರಗಡೆ ಹಾಡಲು ಧೈರ್ಯ ಸುತರಾಂ ಇಲ್ಲದ ಪ್ರಾಣಿಗೂ ಕೂಡ, ಬಚ್ಚಲು ಮನೆಯೊಳಕ್ಕೆ ಕಾಲಿಟ್ಟರೆ ಗೀತಾದೇವಿ ಒಲಿಯುತ್ತಾರೆ.

ಹಾಗೇ ಯೋಚಿಸಿದೆ... ಯಾಕೆ ಹೀಗೆ ಅಂತ?

ವಿಷಯ ಇಷ್ಟೇ ನೋಡಿ... ಸ್ನಾನದ ಮನೆಯೊಳಕ್ಕೆ ಕಾಲಿಟ್ಟರೆ ನಮಗ ಒಂದು ಬಗೆಯ ಸ್ವಾತಂತ್ರ್ಯ ದೊರೆತ ಹಾಗೆಯೇ... ಹೊರಗಡೆ ಇತರರ ಹಂಗು, ಗೆಳೆಯರ ಹಾಸ್ಯ - ಲೇವಡಿ - ಇದರಿಂದಲೇ ನಮಗೆ ನಾಚಿಕೆ - ನಮ್ಮ ಗೆಳೆಯರೆಲ್ಲಾ ನಾವು ಹಾಡಿದಾಗಲೆಲ್ಲಾ ಹೂಂ ಗುಟ್ಟಿದ್ದರೆ - ನಮಗೆ ಬಚ್ಚಲುಮನೆಯನ್ನು ಮರೆಹೋಗಬೇಕಾಗಿರಲಿಲ್ಲ - ಹಾಡುವುದರಿಂದ ಉಂಟಾಗುವ ಆನಂದ, ಸಂತೋಷ ಹಾಡುವವರಿಗೆ ಮಾತ್ರ ಗೊತ್ತು. ಅದು ಒಂದು ಕಲೆ... ಅದಕ್ಕೆ ನೀರೆರೆದು ಬೆಳಸಿ, ಹೂವು ಕಾಯಿ ಬಿಡದಂತೆ ಗೆಳೆಯರು ಕೂಡಿ ಇಲ್ಲೇ ಲೇವಡಿ ಮಾಡಿ ಕತ್ತರಿಸುತ್ತಾರೆ...

ಆದರೆ ಸ್ನಾನದ ಮನೆಯಲ್ಲಿ ನಾವು ನಾವೇ... ನಮಗೆ ಕಾಂಬುದಕೆಲ್ಲಾ ನಾವಲ್ತೆ ದೊರೆಯು. ಒಳಕ್ಕೆ ಹೋಗಿ ಬಾಗಿಲು ಹಾಕಿದ್ದೇ ತಡ-ನಮ್ಮ ಗೆಳೆಯರು ಲೇವಡಿಕಾರರು - ಎಲ್ಲರೂ ದೂರ. ಅದು ನಮ್ಮ ರಾಜ್ಯ. ನಾವು ಹಾಡಿದ್ದೇ ಹಾಡು, ಕೂಗಿದ್ದೇ ಸಂಗೀತ.


ಸ್ನಾನದ ಮನೆಯಲ್ಲೇ ನಾವು ನಾವೇ - ನಮಗೆ ನಾವೇ. ನಮ್ಮ ಗೆಳೆಯರೆಂದರೆ ಹಂಡೆ ಚೊಂಬು ಅವುಗಳ ಮುಂದೆ ಹಾಡುವುದಕ್ಕೆ ನಾಚಿಕೆ ಎಲ್ಲಿಂದ ಬಂತು. ನಾಲ್ಕೂ ಕಡೆಯೂ ಗೋಡೆ - ನಮ್ಮ ಹಾಡು, ಗೆಳೆಯರನ್ನು ಕಂಡು ಕುಹಕವಾಗಿ

ನಗುತ್ತಾ ಹೊರಹರಿಯಲು ಕಿಟಕಿ-ಏಕಾಂತತೆ ನಮಗೆ ಧೈರ್ಯವನ್ನು ಕೊಡುತ್ತದೆ - ಕೈ ಹಿಡಿದು ನಡೆಸುತ್ತದೆ. ಗೋಡೆಗಳು ಮಾರ್ದನಿಗೊಟ್ಟು, ನಮ್ಮ ಕಿವಿಗೆ ಇಮ್ಮಡಿಯ ಇಂಪಾಗಿ ಗೀತೆಗಳು ಮೊಳಗುತ್ತವೆ.

ಇನ್ನೊಂದು ಕಾರಣ - ನಾವು ನೀವು ಹೊಯ್ದುಕೊಳ್ಳುವಾಗ, - ನೀರು ತಲೆಯಿಂದ ಕಾಲಿಗೆ ಹರಿಯುವಾಗ ಉಂಟಾಗುವ ಕಲಕಲನಿನಾದ - ಈ ಮಂಜುಳ ರವದೊಂದಿಗೆ ನಮ್ಮ ಸಂಗೀತವೂ ಸೇರಿ, ಬಚ್ಚಲು ಸೇರುತ್ತದೆ. ನೀವು ಯಾವತ್ತಾದರೂ ಆಲಿಸಿದ್ದೀರಾ ಆ ಶ್ರುತಿಯನ್ನು ಆ ಶ್ರುತಿ ರಸಾಯನದೊಂದಿಗೆ, ನಮ್ಮ ಗೀತವೂ ಮೇಳಯಿಸುತ್ತದೆ - ಇನ್ನೊಂದು ಗುಣವೇನೆಂದರೆ, ನಮ್ಮ ಗೀತ ಹಾಗೇ ಇರಲಿ ರಾಗ ಮಾಲಿಕೆಯೇ ಆಗಲಿ ಕಾಳಭೈರವಿಯೇ ಆಗಲಿ - ಎಲ್ಲಾ ದೇಶದ, ಎಲ್ಲಾ ಬಗೆಯ ಸಂಗೀತಕ್ಕೂ, ಕಂಠಗಳಿಗೂ ಸಮತೂಕದ ಹಿಮ್ಮೇಳವೆಂದರೆ - ನೀರಿನ ಶ್ರುತಿ. ಧ್ವನಿಯಲ್ಲಿ ಅಪಸ್ವರಗಳು ಬಂದರೆ ಅವು ಮಾಸಿ ಹೋಗುತ್ತವೆ. ಧ್ವನಿ ಹೆಚ್ಚಾದರೆ, ಶ್ರುತಿ ಧ್ವನಿಗೆ ತಕ್ಕ ಹಾಗೆ ಸೇರುತ್ತದೆ..ನಮ್ಮ ಹಾಡಿನ ಇಂಪು ಒಂದು ಕೈ ಮೇಲಾಗುತ್ತದೆ.

ಸಂಗೀತ - ಬಚ್ಚಲು ಮನೆಯಲ್ಲಿ ಲೀಲಾಜಾಲವಾಗಲು ಇನ್ನೊಂದು ಕಾರಣ ಬಿಸಿ ನೀರು. ಬಿಸಿ ನೀರಿಗೆ ಇದೊಂದು ಗುಣ ಇದೆ ನೋಡಿ, ಬಿಸಿನೀರು ಹುಯ್ದುಕೊಂಡರೆ, ರಕ್ತ ಬಿಸಿಯಾಗುತ್ತದೆ, ನೋವು ಮಾಯವಾಗುತ್ತದೆ - ಕಂಠ ಸಂಖದಂತಾಗುತ್ತದೆ. ಬಿಸಿ ನೀರು ಕಂಠವನ್ನು ಮೃದುಮಾಡಿ, ಗೀತಗಳು ತಾನಾಗೇ ಹೊರಡುವಂತೆ ಮಾಡುತ್ತದೆ!....

ಸಂ: ಗುಂಡ ಆಗಲೇ ಮಂಗಳ ಹಾಡ್ತಾ ಇದಾನೆ... ಹೋಗ್ಬಿಟ್ಟು ಬರ್ತೀನೆ....



ಹೀಗೊಂದು 'ತೃಪ್ತಿ'

- ಎನ್.ಡಿ. ವಾಸುದೇವ್

ತೃಪ್ತಿ ಯಾರಿಗೆ 'ಗೊತ್ತಿಲ್ಲ'? ಅಥವಾ ಯಾರಿಗೆ 'ಗೊತ್ತಿದೆ'! ಆದರೆ ಇದರ ವಿವಿಧ ರೂಪಗಳನ್ನು ಸವಿಯಲು ಬಹುಶಃ ಆಂಗ್ಲಭಾಷೆಗೆ ಮೊರೆ ಹೋಗಬೇಕಾಗಬಹುದೇನೋ? ಅದ್ಯಾಕೆ, ಕನ್ನಡದಲ್ಲಿ ಇಲ್ಲವೇ ಎಂದು ನೀವು ಮರು ಪ್ರಶ್ನೆ ಹಾಕಬಹುದು.

ಈ ಕೆಳಗಿನ 'ತೃಪ್ತಿ'ಗಳನ್ನು ನೋಡಿ; ನಿರ್ಧಾರ ನಿಮ್ಮದು.

- ಆಹಾ, ಸೊಗಸಾಗಿದೆ. ನಾನು ಎಣಿಸಿದಂತೆಯೇ ಆಯಿತು. ತಪ್ಪು ಎಣಿಸೋದಕ್ಕೆ ಅವಕಾಶವೇ ಇಲ್ಲ. ಅಥವಾ ತಪ್ಪು ಎಣಿಸಬೇಕಾದರೆ ಅದಕ್ಕೇಂತ ಪ್ರಯತ್ನ ಮಾಡಬೇಕಾಗುತ್ತೆ.

- ಇದು Satisfaction

- ಮದುವೆ ಮನೆ. ಮಧ್ಯಾಹ್ನದ ಊಟ ಲೇಟಾಗಿದೆ. ಹೊಟ್ಟೆ ತಾಳ ಹಾಕ್ತಿದೆ. ಗಂಡಿನ ತಾಯಿ ಬಂದು 'ಅಯ್ಯೋ ಲೇಟಾಗಿ ಹೋಯ್ತು, ಊಟ ಹೇಗಿದೆಯೋ ಏನೊ, ತೃಪ್ತಿಯಾಗಿ ಊಟ ಮಾಡಿ' ಅಂತಾರೆ. ವಾಸ್ತವವಾಗಿ ಹೊಟ್ಟೆ ಈಗ ಸಂಗೀತ ಕಛೇರೀನೇ ನಡೆಸಿರುತ್ತೆ. ಊಟ ಯಾವುದೊ ಪಂಚತಾರಾ ಹೋಟೆಲಿನ ತರಹ ನಿಸ್ಸಾರ, ನಿರ್ರುಚಿ (ಸರೀತಾನೇ?) ನಿರ್ಮಲ(!)ವಾಗಿದೆ. ಆವಾಗ ಅತಿಥಿ ಹೇಳ್ತಾನೆ, 'ಛೆ, ಛೆ, ಏನೂ ಲೇಟಾಗಿಲ್ಲ ಊಟ ಭವ್ಯವಾಗಿದೆ.... ಆಹಾ... ಏನು ರುಚಿ, ಏನು ಕಥೆ!'

- ಇದೂ Satisfiction

- ಮನೆಗೆ ಅತಿಥಿಗಳನ್ನ ಕರೆದಿರ್ತೀರಿ. ನೀವು ನಿಮ್ಮ ಗೆಳೆಯ (ಅವನೇ ಅತಿಥಿ)ನನ್ನು 'ಸಂಕೋಚ ಬೇಡಕಣಯ್ಯಾ, ಎಲ್ಲಾ ಕೇಳಿ ಬಡಿಸಿಸ್ಕೋ' ಅಂತೀರಿ ಹಾಗಂತಾ ಬಾಯಿಗೆ ಹಾಕ್ಕೋತೀರಿ. ಏನೋ ಕಡಿಮೆ ಅನ್ನಿಸುತ್ತೆ. 'ಲೇ, ನೋಡೆ, ಉಪ್ಪು ಸ್ವಲ್ಪ ಕಡಿಮೆಯಾಗಿರೋ ಹಾಗಿದೆ... ಆದರೆ ಮಿಕ್ಕಿದ್ದೆಲ್ಲ ಸೊಗಸಾಗಿದೆ...' ಅಂತ ಹೆದರ್ಕ್ಕೊಂಡೇ ಹೇಳ್ತೀರಿ.

- ಇದೂ Satisfraction

- ಅದೇ ಅತಿಥಿ, 'ಸೊಗಸಾಗಿದೆ ಕಣಯ್ಯಾ, ನಿನ್ನ ಬಾಯಿ ಎಲ್ಲೊ ಕೆಟ್ಟಿದೆ... ಏನೂ ಹಾಕಬೇಡಿ ಅಮ್ಮ. ಅವನ್ನ ಡಾಕ್ಟರ ಹತ್ತಿರ ಕರ್ಕೊಂಡು ಹೋಗಿ' ಎಂದು ಹೇಳಿ ಎರಡು ಮೂರು ಬಾರಿ ಜಡಿದು ಊಟ ಮಾಡುತ್ತಾನೆ. ಆಮೇಲೆ... ಅಂದರೆ ಅವನು ಉಂಡುಹೋದ ಮೇಲೆ, ಮನೆಯಲ್ಲಿ ನಡೆಯುವ ಸಂಗ್ರಾಮ

- ಅದೇ Satisfriction

ತಿಂಗಳ ಸಾಮಾನು ಈಗ ತಾನೇ ಬಂತು ಅಂತ ಶ್ರೀಮತಿ ಸಾರಿಗೆ, ಸಾಂಬಾರಿಗೆ ಅಂತ ಮಸಾಲೆ ಹುರಿಯೋಕೆ ಆರಂಭಿಸಿದರೆ ಅದರ ಘಮ ಘಮ ಅಥವಾ ಕಣ್ಣಲ್ಲಿ ನೀರಿಳಿಸುವ ಸುಘಮ ಸಂದೇಶದ ಹಿಂದೆ ಧ್ವನಿ ಬರುತ್ತದೆ 'ಏನ್ರೀ, ವಾಸನೆ ಬರ್‍ತಿದೆಯೇನ್ರೀ' ತಕ್ಷಣ ಹೇಳ್ತೀರಿ 'ಸೊಗಸಾಗಿದೆ ಕಣೆ ... ಆಹಾ... ಇನ್ನು ಸಾರು ಹೇಗಿರುತ್ತೊ' ಅಂತ ಸೇರಿಸ್ತೀರಿ.

- ಅದು Satisfried

- ಪಕ್ಕದ ಮನೇಲಿ ಜಗಳವಾಗ್ತಿರುತ್ತೆ. ನೀವು ನಿಮ್ಮ ದೊಡ್ಡಸ್ತಿಕೆ ತೋರಿಸ್ತೀರಿ. 'ಏನೋ ದೊಡ್ಡ ಮನುಷ್ಯ, ಮಧ್ಯದಲ್ಲಿ ಬಾಯಿ ತೂರಿಸಿದ' ಅಂತ ಪಕ್ಕದವರು ಗೊಣಗಿದಾಗ ನಿಮ್ಮ ಮನೆಯವಳು ಒಳಗೆ ಸೆಳೆದುಕೊಳ್ಳುತ್ತಾಳೆ, ದುರುಗುಟ್ಟಿ ನೋಡುತ್ತಾಳೆ. ಅವಳು ಹೇಳಬೇಕಾದ್ದೆ ಇಲ್ಲ - ನಿಮ್ಮ ಮಾನ ಮೂರು ಕಾಸಿಗೆ ಹರಾಜಾಯ್ತು ಅಂತ

- ಅದೊಂದು ತರಹ Satisfauction

- ನೀವು ನಿಮ್ಮ ಸ್ನೇಹಿತನಿಗೆ ದುಡ್ಡು ಕೊಟ್ಟಿರ್‍ತೀರಿ - ಸಾಲ ಅಂತ - ಸಾಲ ಕೊಟ್ಟರೆ ಸ್ನೇಹಕ್ಕೆ ಸಂಚಕಾರ ಅಂತ ಗಾದೆ ಕೇಳಿದ್ದೂ. ಅವನು ಭಾಗಶಃ ಹಿಂತಿರುಗಿ ಕೊಡ್ತಾನೆ. 'ಸಂತೋಷ ಆಯ್ತೇನಯ್ಯಾ' ಅಂತ ಬೇರೆ ಕೇಳ್ತಾನೆ! ಸಂತೋಷ ಆಗಲಿಲ್ಲ ಅಂದರೆ ಮಿಕ್ಕ ಹಣ ಬರೋದೂ ಬರೊಲ್ಲವೇನೊ ಅನ್ನುವ ಭಯ. ಹಾಗಾಗಿ ಜೋರಾಗಿ, 'ಥ್ಯಾಂಕ್ಸ್ ಕಣಯ್ಯಾ... ಮಿಕ್ಕಿದ್ದೂ... ಹಾಗೆ ಬೇಗ ಕೊಟ್ಬುಬಿಡು' ಅಂತೀರಾ

- ಇದೇ Satisfaketion

- ಅಳಿಯಂದಿರಿಗೆ ದೀಪಾವಳಿ ಸಂಭ್ರಮ. ಅತ್ತೆ ಮಾವನವರು ಬಂದ ಅಳಿಯಂದಿರನ್ನು ಅದ್ಭುತವಾಗಿ ಸ್ವಾಗತಿಸುತ್ತಾರೆ. ಏನೇನೋ ಉಡುಗೊರೆಗಳ ಆಸೆ ಹೊತ್ತ ಅಳಿಮಯ್ಯ ಹಬ್ಬದ ದಿನ ಎಣ್ಣೆ ನೀರಾದ ಮೇಲೆ, ಆರತಿ ಎತ್ತಿ ಒಂದು

ಪಂಚೆ, ಒಂದು ಉತ್ತರೀಯ ಕೊಟ್ಟು ಮಾವನವರು 'ಸಂತೋಷವಾಯ್ತು ಅಳಿಯಂದರೇ' ಎಂದಾಗ ಆತ ನಗುತ್ತಾ 'ಓಹೋ' ಎನ್ನುವುದೇ.

- Satisfacade

- ಸಮಾರಾಧನೆ ಊಟ. ಹಿಂದೆ ನೋಡಿಲ್ಲ, ಮುಂದೆ ನೋಡೋ ಹಾಗಿಲ್ಲ. ಅಂತಹ ಭರ್ಜರಿ ಊಟ. ಪಲ್ಯಗಳು, ಹುಳಿಗಳು, ಸಿಹಿತಿಂಡಿಗಳು, ಖಾರಾಸೇವೆಗಳು, ಪಾಯಸಗಳು - ಸಾಲು ಸಾಲಾಗಿಗಿ ಬರುತ್ತಿವೆ. ಅಷ್ಟೂ ತಿಂದ ಮೇಲೆ ಎದ್ದು ನಿಲ್ಲುವುದಕ್ಕೆ ಆಗುವುದಿಲ್ಲ! ಕೈಕೊಟ್ಟು ಹಿಡಿದೆತ್ತಬೇಕಾಗುತ್ತೆ.

- ಅದು ನೋಡಿ Satisfed

- ಇದೇ ಗಿರಾಕಿ, ಎದ್ದುನಿಂತು, ಊಟ ಹಾಕಿದ ಯಜಮಾನರನ್ನು ಹುಡುಕಿ, 'ಆಹಾ, ಏನು ಅದ್ಭುತ, ಬರೀ ಪುರಾಣಗಳಲ್ಲಿ ಕೇಳಿದ್ದೆವು, ಹೀಗೆ ಒಂದು ಭೋಜನ ಅಂತ ಇರುತ್ತೆ ಅಂತ... ನೀವು ನಿಜ ಮಾಡಿ ಬಿಟ್ಟಿರಿ... ನೀವು ಧನ್ಯರು...' ಎಂದು ಸಾಷ್ಟಾಂಗ (ಕಷ್ಟವಾಗುತ್ತಿದ್ದರೂ) ಮಾಡುವುದು.

- ನೋಡಿ Satisflattery

- ಇಂತಹದೇ ಒಂದು ದಿವ್ಯ ಭೋಜನದ ನಂತರ 'ಒಂದೇ ಒಂದು ಅಗುಳು ನನ್ನ ಕೈಯಲ್ಲಿ ತಿನ್ನೋಕೆ ಆಗೊಲ್ಲ' ಅಂತ ಡಿಕ್ಲೇರ್ ಮಾಡಿರೋವಾಗ ಮನೆಯೊಡತಿ ಘಮಘಮಿಸುವ ಕಾಫಿಯನ್ನು ತಂದಾಗ, ಒಂದು ಕ್ಷಣ ಕಣ್ಣಗಲಿಸಿ, ನಿಧಾನವಾಗಿ ಆಪೋಶನ ತೆಗೆದುಕೊಳ್ಳುತ್ತಾ ಆನಂದದ ಚರಮ ಸೀಮೆಯನ್ನು ಮುಟ್ಟುವುದೇ.

- Satispotion

ಸದ್ಯಕ್ಕೆ ಇಷ್ಟು ಸಾಕಲ್ಲ?

ಹಾದಿಯಲ್ಲಿ ಕೇಳಿಸಿದ್ದು:

ಕೌನ್ ಬನೇಗಾ ಕ್ರೋರ್‌ಪತಿ ಅಂತ ಕೇಳಿದ್ರೆ,
ತಕ್ಷಣ ವೀರಪ್ಪನ್ ಅನ್ನುತ್ತಲ್ಲಾ ನಮ್ಮ ಪಾಪು,
ಸ್ವಲ್ಪಾನೂ ಬುದ್ಧಿ ಇಲ್ಲಾರೀ ಅದಕ್ಕೆ....

ಗೋದ್ರೇಜ್ ಕಪಾಟ್ ಎಂಬ ಸರ್ವಸ್ವ

– ಶೋಭಾ ಪ್ರಮೋದ್

ಹೆಣ್ಣಿಗೆ ಗಂಡೇ ಸರ್ವಸ್ವ ಎನ್ನುತ್ತಾರೆ. ಅದೇನೇ ಇರಲಿ, ನನಗಂತೂ, ನಮ್ಮ ಹಳೆಯ ಗೋದ್ರೇಜ್ ಕಪಾಟೇ ಸರ್ವಸ್ವ ಮಾರಾಯ್ರೇ!

ಅತ್ತೆ-ಮಾವನವರು ವಾಸಿಸಿದ ಹಳೆಯ ಮನೆ ನನಗೆ ದೊರಕಿತು. ಸುಮಾರು, ಎಂಭತ್ತು ವರ್ಷಗಳಷ್ಟು ಹಳೆಯದಾಗಿರುವ, ಆದರೂ ಮುದುಕನಂತೆ ಇನ್ನೂ ಗಟ್ಟಿಮುಟ್ಟಾಗಿರುವ, ಈ ಕಪಾಟಿನಲ್ಲಿ ಮಾವನವರು ಆಯ-ವ್ಯಯ ಇತ್ಯಾದಿ Accounts ಪುಸ್ತಕಗಳನ್ನು ಇಡುತ್ತಿದ್ದರಂತೆ. ಮುಖ ನೋಡಿಕೊಳ್ಳೋಣ ಎಂದರೆ ಇದಕ್ಕೆ ಕನ್ನಡಿಯಿಲ್ಲ. ಸೀರೆಗಳನ್ನು ವ್ಯವಸ್ಥಿತವಾಗಿ ಇಡಲು ಹ್ಯಾಂಗರ್ ವ್ಯವಸ್ಥೆ ಇರುತ್ತದೆ ಅಲ್ಲವೇ? ಅದೂ ಇಲ್ಲ.

ಈ ಕಪಾಟಿನಲ್ಲಿ ಐದು ವಿಭಾಗಗಳಿವೆ. ನಾನು ಶಾಲಾ ಕಾಲೇಜು, ವಿ.ವಿ.ದಲ್ಲಿ ಗಳಿಸಿದ ಅಂಕಪಟ್ಟಿಗಳೆಂಬ (ವ್ಯರ್ಥ?!) ಕಾಗದಗಳು; ಓಡಿದ್ದು, ಹಾಡಿದ್ದು, ಕುಣಿದದ್ದು, ಮೇಜುಕುಟ್ಟಿ ಭಾಷಣ-ಚರ್ಚೆ, ಕವಿಗೋಷ್ಠಿಯಲ್ಲಿ ಕಿರುಚಿದ್ದು... ಇತ್ಯಾದಿ ಪ್ರಶಸ್ತಿ ಪತ್ರಗಳ ರಾಶಿಗಳಿವೆ. ನನ್ನ ದೊಡ್ಡ ಫೈಲ್‌ನಲ್ಲಿ, ನಾನು ಈ ತನಕ ಬರೆದ ಪ್ರಕಟವಾದ, ಆರುನೂರಕ್ಕೂ ಹೆಚ್ಚು ಕವಿತೆ, ಹಾಸ್ಯ ಬರೆಹ, ಕಥೆ, ಲೇಖನಗಳ ಕಟ್ಟಿಂಗ್‌ಗಳಿಗೆ. ಸ್ವಂತ ಮಕ್ಕಳ ಬೆನ್ನು ತಟ್ಟದ ನಾನು, ಆಗಾಗ ಪ್ರೀತಿಯಿಂದ ''ನಾ ಮಾಡಿದ ಕರ್ಮ''(?!) ಗಳನ್ನು ಸವರಿ, ಅವುಗಳಿಗೆ ಮುದ ತರಿಸುತ್ತೇನೆ!

ಕೇವಲ ಇಪ್ಪತ್ತೇ ಸೀರೆಗಳು, ಆದರೆ ನೂರಕ್ಕಿಂತ ಹೆಚ್ಚಿನ (ರಾಘವೇಂದ್ರ ಗುರುಗಳ) ಭಜನೆ ಕ್ಯಾಸೆಟ್‌ಗಳಿವೆ. ಕನ್ನಡದಲ್ಲಿ ಇರುವ ಕಾರಣ, ಕಳ್ಳರೂ ಇವುಗಳನ್ನು ಖಂಡಿತ ಕೊಂಡೊಯ್ಯಲಾರರು ಎಂಬ ಖಾತ್ರಿ ನನಗಿದೆ!

ಮನೆಗೆ ನೆಂಟರು ಬಂದರೆ, ನೀಟಾಗಿ ಇರಬೇಕೆಂಬ ದೂ(ದು)ರಾಲೋಚನೆಯಿಂದ ಇಸ್ತ್ರಿ ಮಾಡಿದ ಇಪ್ಪತ್ತೈದು ಬೆಡ್‌ಶೀಟ್-ಚಾದರಗಳ ಪ್ರಪಂಚವೇ ಇನ್ನೊಂದು ವಿಭಾಗದಲ್ಲಿ ಹಾಯಾಗಿವೆ!! ವ್ಹೀಲ್ ಹಾಗೂ ಲೈಫ್‌ಬಾಯ್ ಸಾಬೂನುಗಳ ಸಂಗ್ರಹವೂ ಅದರಲ್ಲಿಯೇ ಕಣ್ಮುಚ್ಚಿ ಮಲಗಿದೆ! ಕವಿತೆಗಳ ಐದು ಡೈರಿಗಳಿವೆ. ಸುಭಾಷಿತಗಳ ಸಂಗ್ರಹವಿದೆ. ಹೊಸ ರುಚಿ ಮಾಡದಿದ್ದರೂ ತುರ್ತು ಪರಿಸ್ಥಿತಿಯಲ್ಲಿ ಇರಲಿ ಎಂಬ ಯೋಚನೆಯಿಂದ ಸಂಗ್ರಹಿಸಿದ ಪತ್ರಿಕೆಗಳ ತುಣುಕುಗಳೂ ಇಣುಕುತ್ತವೆ!


ನಾನು ಅಧ್ಯಾಪಿಕೆಯಾಗಿರುವ ಕಾರಣ ಪುಸ್ತಕಗಳೂ ಇವೆ!

ಹೀಗೆ, ನಾನು ಒಂದು ಕಪಾಟ್ ತೆರೆದರೆ ಬ್ರಹ್ಮಾಂಡವೇ ಕಣ್ಮುಂದೆ ಬರುತ್ತೆ!

"ಛೇ! ಎಂತದ್ದು ಮಾರಾಯ್ರೇ? ಎಂತಹ ಪಿಟ್ಟಾಸಿ ಜನ ನೀವು? ಹೊಸ ಕಪಾಟ್ ಒಂದನ್ನು ಖರೀದಿಸಬಾರದೇ?" ಎಂದು ನೆಂಟರು, ಗೆಳತಿಯರು ವ್ಯಂಗ್ಯದಿಂದ ಚಚ್ಚುತ್ತಾರೆ!

"ಆಸೆಯೇ ದುಃಖಕ್ಕೆ ಕಾರಣ. ಆಸೆಯನ್ನು ತ್ಯಜಿಸುವುದೇ ಸುಖದ ಸೋಪಾನ. ಒಂದೇ ಒಂದು ಶಕ್ತಿ, ಅದುವೇ ಪರಮಾತ್ಮ, ಇಡೀ ವಿಶ್ವವನ್ನೇ ಧಾರಣ ಮಾಡಿರುತ್ತಾನೆ. ಆ ಶಕ್ತಿ ಎಂಬ ಛತ್ರಿಯ ಕೆಳಗೆ, ಸಕಲ ಮಾನವ, ಪ್ರಾಣಿಸಂಕುಲ ಅಡಗಿದೆ. ಹಾಗೆಯೇ, ನನ್ನ ಹಳೆಯ ಕಪಾಟು ಪರಮಾತ್ಮನ ಸಂಕೇತವಿದೆ. ಅದರೊಳಗೆ ಸಂಸಾರದ ಸಕಲ ಸಾಮಗ್ರಿಗಳೂ ಅಡಗಿವೆ. "ಎಲ್ಲವೂ ಒಂದು. ಹಾಗೂ ಒಂದರೊಳಗೆ ಎಲ್ಲವೂ"!! ಎಂಬ ತತ್ತ್ವಜ್ಞಾನವನ್ನು ಈ ಕಪಾಟು ತೋರಿಸಿಕೊಡುತ್ತದೆ. ಹಾಗಾಗಿ, ನನಗಿದು ಬಹಳ ಪ್ರಿಯ" ಎಂದು ನಾನು ನುಡಿದಿರುತ್ತೇನೆ.

ಪ್ರಿಯ ಓದುಗರೇ, ಸಂಸಾರದಲ್ಲಿದ್ದೂ, ಬ್ರಹ್ಮಾಂಡದ ಕಲ್ಪನೆ ಬರಬೇಕಾದರೆ ನೀವು ನಿಮ್ಮ ಗೋದ್ರೇಜ್ ಕಪಾಟಿನಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ತುರುಕಿರಿ! ಸಾವಕಾಶವಾಗಿ, ನಿಮ್ಮ ಪತ್ನಿಗೆ ಸೀರೆ, ಒಡವೆಗಳ ಮೋಹ ಕಡಿಮೆಯಾಗಿ ಆಕೆ ಖಂಡಿತ ತತ್ತ್ವಜ್ಞಾನಿಯಾಗುತ್ತಾಳೆ! ನೀವು ಏನಂತೀರಾ?!



ಒಂದು ಪ್ರಿಪರೇಟರಿ ಕ್ವಿಜ್

(ಸಾಫ್ಟ್‌ವೇರ್ ಇಂಜಿನಿಯರುಗಳಿಗಾಗಿ)

– ಶಿವು

ನಿಮ್ಮ ಮಗು ಸಾಫ್ಟ್‌ವೇರ್ ಇಂಜಿನಿಯರಾಗಲೆಂದು ಕನಸು ಕಾಣುತ್ತಿರುವಿರಾ? ಖಂಡಿತಾ ಆಗುತ್ತೇರೀ, ಚಿಂತಿಸಬೇಡಿ. ಮಗುವಿಗೆ ತಕ್ಕ ಶಿಕ್ಷಣ ಕೊಡುವುದನ್ನು ಮಾತ್ರಾ ಮರೆಯಬೇಡಿ. ಈ ಶಿಕ್ಷಣದ ಒಂದು ಮುಖ್ಯ ಅಂಶ ತರ್ಕ. ಹೌದೂರೀ, ಸಾಫ್ಟ್‌ವೇರಿನ ಸಮಸ್ತ ಜೀವಾಳವೂ ತರ್ಕದಲ್ಲೇ ಅಡಗಿರೋದು. ತರ್ಕಶಾಸ್ತ್ರಾನ ನಿಮ್ಮ ಮಗು ಅರಗಿಸ್ಕೊಂಡು ಬಿಟ್ರೆ, ಆಗ ನೋಡಿ, ಅದು ಹೇಗೆ ಪ್ರವರ್ಧಮಾನಕ್ಕೆ ಬರುತ್ತೇ ಅಂತ. ತರ್ಕ ಅಂದರೇನು ಅಂತ ಕೇಳಿದ್ರಾ?

ಸರಿಹೋಯ್ತು, ತೀರ ಅಷ್ಟೂ ಗೊತ್ತಿಲ್ಲವೇನ್ರೀ ನಿಮಗೆ. ಹೋಗ್ಲೀ ಬಿಡಿ. ಉದಾಹರಣೆ ಸಮೇತ ನಾನೇ ಹೇಳಿಬಿಡ್ತೇನೆ. ಹೇಗಿದ್ರೂ ನೀವೇ ತಾನೇ ನಿಮ್ಮ ಮಗೂಗೆ ತರ್ಕ ಕಲಿಸ್ಬೇಕು. ಸಾವಧಾನವಾಗಿ ಲಾಲಿಸಿ.

ಸಾಫ್ಟ್‌ವೇರ್ ಇಂಜಿನಿಯರುಗಳ ತರ್ಕನ ಸುಲಭವಾಗಿ ಅರ್ಥಮಾಡಿಕೋಬೇಕಾದ್ರೆ ಒಂದು ಕ್ವಿಜ್‌ನ ಗಮನಿಸ್ಬೇಕು. ಕ್ವಿಜ್ ಗೊತ್ತೂತಾನೇ. ಅದೇರೀ ಕ್ರೋರ್ ಪತಿನಲ್ಲಿ ಅಮಿತಾಬ್ ಕೇಳ್ತಾನಲ್ಲಾ, ಒಂದಕ್ಕೆ ಒಂದು ಸೇರಿದರೆ ಎಷ್ಟೂ ಅಂತ. ಅದಕ್ಕೆ ಉತ್ತರವಾಗಿ ನಾಲ್ಕು ಆಯ್ಕೆಗಳು. ಒಂದು, ಹನ್ನೊಂದು, ಎರಡು, ಇಪ್ಪತ್ತೆರಡು. ಇದಕ್ಕೆ ಉತ್ತರವಾಗಿ ಅವನ ಮುಂದೆ ಕೂತಿರುವ ಸ್ಪರ್ಧಿ ತೀವ್ರವಾಗಿ ಆಲೋಚನೆ ಮಾಡಿ, ಹಣೆಯನ್ನೆಲ್ಲಾ ನಿರಿಗೆ ಹಾಕಿಕೊಂಡು, ಬೆವರುತ್ತಾ ಕೊನೆಗೆ ಹೆಲ್ಪ್‌ಲೈನ್ ನೆರವು ಕೇಳುತ್ತಾನೆ. ಅದೆಲ್ಲಾ ನೀವು ನೋಡಿರೋದೇ ಅಲ್ಲವೇನ್ರೀ. ಇದೇ ಕ್ವಿಜ್.

ಆದರೆ ಸಾಫ್ಟ್‌ವೇರ್ ನೋರಿಗೆ ಬೇಕಾಗೋ ಕ್ವಿಜ್‌ನ ರೀತೀನೇ ಬೇರೇ. ಕೆಳಗಿನ ನಾಲ್ಕು ಪ್ರಶ್ನೆಗಳನ್ನ ನೋಡಿ. ನಿಮಗೇ ತಿಳಿಯುತ್ತೆ.

ಮೊದಲನೇ ಪ್ರಶ್ನೆ:

ಒಂದು ಜಿರಾಫೆನ ಫ್ರಿಜ್ ನೊಳಗೆ ಹೇಗೆ ಕೂರಿಸ್ತೀರ?

ಇದಕ್ಕೆ ತಾರ್ಕಿಕವಾಗಿ ಸರಿಯಾದ ಉತ್ತರ ಏನು ಗೊತ್ತೇ. ಫ್ರಿಜ್‌ನ ಬಾಗಿಲು ತೆಗೆದು, ಅದರೊಳಗೆ ಜಿರಾಫೆ ಇಟ್ಟು ಪುನಃ ಬಾಗಿಲು ಮುಚ್ಚೋದು.

ಸರಳವಾದ ಪ್ರಶ್ನೆಗಳಿಗೆ ನೀವು ಸದಾ ಸಂಕೀರ್ಣವಾದ ಉತ್ತರಗಳನ್ನೇ ಹುಡುಕುತ್ತೀರೋ ಎಂಬುದನ್ನು ಈ ಪ್ರಶ್ನೆ ಪರೀಕ್ಷಿಸುತ್ತದೆ.

ಎರಡನೇ ಪ್ರಶ್ನೆ:

ಒಂದು ಆನೇನ ಫ್ರಿಜ್‌ನಲ್ಲಿ ಹೇಗೆ ಕೂರಿಸ್ತೀರ?

ಇದಕ್ಕೆ ಸರಿಯಾದ ಉತ್ತರ, ಮೊದಲು ಫ್ರಿಜ್ ಬಾಗಿಲು ತೆಗೆದು, ಒಳಗಿರುವ ಜಿರಾಫೇನ ಹೊರಕ್ಕೆ ತೆಗೆದು ಅನಂತರ ಅದರೊಳಗೆ ಆನೇನ ಇಟ್ಟು ಬಾಗಿಲು ಮುಚ್ಚೋದು.

ಈ ಪ್ರಶ್ನೆ ತರ್ಕದ ಜೊತೆಗೆ ನಿಮ್ಮ ಜ್ಞಾಪಕ ಶಕ್ತಿಯನ್ನೂ ಸಹಾ ಪರೀಕ್ಷಿಸುತ್ತೆ.

ಮೂರನೆಯ ಪ್ರಶ್ನೆ:

ಕಾಡಿನಲ್ಲಿ ಸಿಂಹರಾಜ ಎಲ್ಲ ಪ್ರಾಣಿಗಳ ಒಂದು ಸಭೆ ಕರೆದಿದ್ದಾನೆ. ಈ ಸಭೆಗೆ ಒಂದು ಪ್ರಾಣಿಯನ್ನು ಹೊರತುಪಡಿಸಿ ಮಿಕ್ಕೆಲ್ಲ ಪ್ರಾಣಿಗಳೂ ಹಾಜರಾಗಿರುತ್ತವೆ. ಸಭೆಗೆ ತಪ್ಪಿಸಿಕೊಂಡ ಪ್ರಾಣಿ ಯಾವುದು?

ಸರಿಯುತ್ತರ, ಆನೆ. ಯಾಕೆ ಅಂದ್ರೆ ಅದು ಫ್ರಿಜ್‌ನಲ್ಲಿರುತ್ತಲ್ಲಾ.

ನಿಮ್ಮ ನೆನಪಿನ ಶಕ್ತಿಯನ್ನ ಈ ಪ್ರಶ್ನೆ ಅಳೆಯುತ್ತದೆ.

ನಾಲ್ಕನೆಯ ಪ್ರಶ್ನೆ:

ಒಂದು ನದಿ. ಅದರ ತುಂಬಾ ಮೊಸಳೆಗಳು. ನೀವು ಆ ನದಿಯನ್ನ ಈಜಿ ದಾಟಬೇಕು. ಹೇಗೆ ಈ ಕೆಲಸಾನ ಸಾಧಿಸ್ತೀರಾ?

ಸರಿಯುತ್ತರ ತೀರ ಸುಲಭ. ಮೃಗರಾಜ ಕರೆದ ಸಭೇಗೆ ಎಲ್ಲ ಮೊಸಳೆಗಳೂ ಹೋಗಿರುಲ್ಲವೇನ್ರೀ. ಖಾಲಿ ಇರೊ ನದೀನ ಈಜಿ ದಾಟೋದೇನು ಮಹಾ ಕಷ್ಟ.

ಈ ಪ್ರಶ್ನೆ ನೀವು ನಿಮ್ಮ ತಪ್ಪುಗಳಿಂದ ಪಾಠ ಕಲೀತೀರೋ ಅನ್ನೋದನ್ನ ಪರೀಕ್ಷಿಸುತ್ತೆ.

ತರ್ಕ ಅಂದರೇನು ಅಂತ ಈಗ ನಿಮಗೆ ಅರ್ಥವಾಗಿರಬಹುದಲ್ಲವೇ. ಅದಕ್ಕಿಂತ ಹೆಚ್ಚಾಗಿ ನಿಮ್ಮ ಸಾಫ್ಟ್‌ವೇರ್ ಅಳಿಯ ಮಾರ್ಕೆಟ್‌ನಿಂದ ಪಾಲಕ್ ತಾ ಅಂದ್ರೆ ದಂಟಿನ ಸೊಪ್ಪು ತಂದದ್ದನ್ನ ಕ್ಷಮಿಸುಕ್ಕೆ ಈಗ ನೀವು ರೆಡಿ ತಾನೇ?

★★★

ಅನಿರೀಕ್ಷಿತ

– ಡಾ|| ಶ್ರೀ ವೆಂಕಟರಮಣ

(ದಿನನಿತ್ಯದ ಆಗುಹೋಗು ನಮ್ಮ ನಿರೀಕ್ಷೆಯನ್ನು ಹುಸಿಗೊಳಿಸುವುದು ಸಾಮಾನ್ಯ ಸಂಗತಿ. ಪರೀಕ್ಷೆಯಲ್ಲಿ ಉನ್ನತ ದರ್ಜೆ ದೊರೆಯುತ್ತದೆಂದು ನಂಬಿದವರು ನಪಾಸಾಗುವುದು, ಸೋಲುತ್ತದೆಂದು ತಿಳಿದಿದ್ದ ತಂಡ ಗೆಲ್ಲುವುದು, ಗಂಡುಕೂಸು ಬರುತ್ತದೆಂದು ನಿರೀಕ್ಷಿಸಿದಲ್ಲಿ ಲಕ್ಷ್ಮಿಯ ಆಗಮನ ಇವೆಲ್ಲ ಅಪರೂಪವಲ್ಲ. ಅನಿರೀಕ್ಷಿತ ಫಲಿತಗಳ ಕೆಲವು ಪ್ರಸಂಗಗಳನ್ನು ಕೆಳಗೆ ಸೂಕ್ಷ್ಮವಾಗಿ ತಿಳಿಸಿದೆ. ಅವನ್ನು ಓದಿ ಸಂತೋಷಪಡುವಿರೆಂಬ ನಿರೀಕ್ಷೆ ನಮ್ಮದು; ಬಿಡುವಿದ್ದರೆ ನಗಲೂಬಹುದು. ಈ ನಿರೀಕ್ಷೆ ಮಾತ್ರ ಸುಳ್ಳಾಗದಿರಲಿ!)

ತುಂಗಾ ನಿಲಯದ ವಿದ್ಯಾರ್ಥಿಗಳು ದಡ್ಡತನಕ್ಕೆ ಮಾದರಿಯಾಗಿದ್ದರು. ಅವರ ತಿಳುವಳಿಕೆಯ ಮಟ್ಟವನ್ನು ಉದ್ಧರಿಸಲು ಪಂಡಿತ ಶಾಮಾಶಾಸ್ತ್ರಿಗಳ ನೇಮಕವಾಯಿತು. ಆರು ತಿಂಗಳ ಬಳಿಕ ನಿಲಯದ ಅಧಿಕಾರಿಗಳು ತಪಾಸಣೆಗಾಗಿ ಬಂದರು, ನಿಲಯವಾಸಿಗಳ ಜ್ಞಾನ ವೃದ್ಧಿಯಾಗಿರುತ್ತದೆಂಬ ನಿರೀಕ್ಷೆಯಲ್ಲಿ. ಅಲ್ಲಿ ಒಟ್ಟು ಗೊಂದಲ; ಸರಿಸುಮಾರು ಕಿಷ್ಕಿಂಧಾಕಾಂಡ ನಡೆಯುತ್ತಿದ್ದ ಸನ್ನಿವೇಶ ಕಂಡುಬಂತು. ತಂಡದ ಮುಖ್ಯರು 'ಶಾಸ್ತ್ರಿಗಳೆಲ್ಲಿ?' ಎಂದು ಪ್ರಶ್ನಿಸಿದರು. ಅವರು ಅಲ್ಲೆಲ್ಲೂ ಕಾಣಿಸಲಿಲ್ಲ. ಇನ್ನೂ ಜೋರಾಗಿ ಮೇಲುದನಿಯಲ್ಲಿ ಗದರಿದಾಗ, ದೂರದ ಹೊರಗೋಡೆಯ ಮೇಲೆ ಆಸೀನನಾಗಿದ್ದ ಪೆದ್ದನೊಬ್ಬ "ನಾನಿಲ್ಲಿದ್ದೀನಿ ಬುದ್ಧೀ, ಸಾಮಯ್ಯ!" ಎಂದ. ಶತದಡ್ಡರ ಒಡನಾಟದಿಂದ ಪಂಡಿತರ ಸ್ಥಿತಿಗತಿ ಈ ರೀತಿಯಾಗಿತ್ತು. ದಡ್ಡತನ ಸಾಂಕ್ರಾಮಿಕ!!

★★★★★

ಕೃಷ್ಣ ಅವಧಾನಿ ಪ್ರಕಾಂಡ ಪಂಡಿತರು; ನಿತ್ಯ ಪುರಾಣ ಪ್ರವಚನ ಮಾಡುತ್ತಿದ್ದವರು. ಗುರುದಕ್ಷಿಣೆ ಸ್ವೀಕಾರಕ್ಕೆ ಅವರೊಂದು ಸರಳ ನಿಯಮವನ್ನು ರೂಪಿಸಿದ್ದರು. ಪ್ರವಚನ ಕೇಳಿದವರಿಗೆ ಅದರಿಂದ ವಾಸ್ತವವಾಗಿಯೂ ಪ್ರಯೋಜನವಾದರೆ ಮಾತ್ರ ಗುರುಕಾಣಿಕೆ ಕೊಡಿರೆಂದು ಅವರು ಸ್ಪಷ್ಟವಾಗಿ ತಿಳಿಸಿದ್ದರು. ಹೀಗಿರುವಾಗ ಅವಧಾನಿಗಳ ಮಹಾಭಾರತ ಪ್ರವಚನವನ್ನು ಹಲವು ದಿನ ಆಲಿಸಿದ ಮಹಿಳಾಮಣಿಯೊಬ್ಬರು ದಕ್ಷಿಣೆ ತಂದಿತ್ತಾಗ ಅವರು

ಸಹಜವಾಗಿಯೇ "ಉಪನ್ಯಾಸದಿಂದ ನಿಮಗೆ ಅನುಕೂಲವಾಗಿರಬೇಕು, ಅಲ್ಲವೇ, ತಾಯೀ?" ಎಂದು ಪ್ರಶ್ನಿಸಿದರು. ಅವರಿಗೆ ದೊರೆತ ಉತ್ತರವಿದು "ಹೌದು, ಖಂಡಿತ ಹೌದು. ದ್ರೌಪದಿಯ ವೃತ್ತಾಂತ ತಿಳಿದ ಬಳಿಕ ಜೀವನದಲ್ಲಿ ಐವರ ವರೆಗೆ ಪುರುಷ ಸಂಪರ್ಕ ತಪ್ಪಲ್ಲವೆಂದು ತಿಳಿದು ನನಗೀಗ ತುಂಬ ನೆಮ್ಮದಿಯಾಗಿದೆ. ನಾನು ಮೊದಲು ಬಹಳ ಗೊಂದಲದಲ್ಲಿದ್ದೆ!" ಈ ವರದಿಯನ್ನಾಲಿಸಿದಾಗ ಅವಧಾನಿಗಳಿಗೆ ಷಾಕ್ ಹೊಡೆದಿರಬೇಕು, ಪಾಪ!! ಲೋಕೋ ವಿಭಿನ್ನ ರುಚಿ:

★★★★★

ಗಜೇಂದ್ರ ಪಾಟೀಲರು ಹರಪನಹಳ್ಳಿಯಲ್ಲಿ ಪ್ರತಿಷ್ಠಿತ ವ್ಯಕ್ತಿ; ಸಮಾಜ ಸೇವಕನೆಂಬ ಬಿರುದು ಹೊತ್ತವರು. ಬುದ್ಧಿಯಿಲ್ಲದ ಬೀದಿನಾಯಿಯೊಂದು, ತನ್ನ ಬುದ್ಧಿಹೀನತೆಯನ್ನು ಸಾಬೀತುಪಡಿಸಲೆಂದೋ ಏನೋ, ಪಾಟೀಲ ಮಹಾಶಯರಿಗೊಮ್ಮೆ ಕಚ್ಚಿತು. ಎಲ್ಲ ಜನರು ತಮ್ಮ ಅನುಕಂಪವನ್ನು ಪಾಟೀಲರ ಪರವಾಗಿ ಪ್ರಕಟಿಸಿದರು; ಆ ಬಡಶ್ವಾನದ ಪರವಾಗಿ ಯಾರೂ ವಕಾಲತ್ತು ವಹಿಸಲಿಲ್ಲ! ನಾಯಿಗೆ ಹುಚ್ಚಿದ್ದರೇನು ಗತಿಯೆಂಬ ಕಾತರತೆ ಎಲ್ಲರಿಗೆ. ದಿನ ಉರುಳಿದಂತೆ ಜನ ಪಾಟೀಲರ ಆರೋಗ್ಯವನ್ನು ವಿಚಾರಿಸುವವರೇ. ಮೂರು ವಾರಗಳ ಬಳಿಕ ಈ ಘಟನೆಯ ಫಲಿತವಾಗಿ ಒಂದು ಜೀವ ಹೊರಟೇ ಹೋಗಿತ್ತು; ಆದರೆ ಅದು ಪಾಟೀಲರದ್ದಲ್ಲ, ಬಡಪಾಯಿ ನಾಯಿಯದ್ದು! ಈ ಪ್ರತಿಷ್ಠಿತರ ನಂಜನ್ನು ಆ ಚತುಷ್ಪಾದಿ ಭರಿಸಿಕೊಳ್ಳಲಾರದೆ ಹೋಯಿತು!

★★★★★

ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗವೊಂದರಲ್ಲಿ ವಿದ್ಯಾರ್ಥಿ ಸಂಖ್ಯೆಯ ಕೊರತೆಯಿತ್ತು. MBA, MCA ಇತ್ಯಾದಿ ವ್ಯಾಸಂಗಗಳ ಆಕರ್ಷಣೆಯಿಂದಾಗಿ ವಿದ್ಯಾರ್ಥಿಗಳ ನೂಕುನುಗ್ಗಲು ಅಲ್ಲಿಗೆ; ಬರಿಯ ಬರಗಾಲವಿಲ್ಲಿ. ಈ ಬಾರಿ ಬರಗಾಲದ ತೀವ್ರತೆ ಎಷ್ಟಾಗಿದೆಯೆಂದರೆ ಹನ್ನೊಂದು ಪ್ರಾಧ್ಯಾಪಕರಿರುವ ಈ ವಿಭಾಗಕ್ಕೆ ಬರಿಯ ಎರಡು ವಿದ್ಯಾರ್ಥಿಗಳು! ಕ್ರಿಕೆಟ್ ಆರಾಧಕರೊಬ್ಬರು ಈ ಸನ್ನಿವೇಶವನ್ನು ಸೊಗಸಾಗಿ ವಿವರಿಸುತ್ತ, "ಆಟದಲ್ಲಿ ಹೆಚ್ಚಾಗಿ ಹನ್ನೊಂದು ಆಟಗಾರರು, ಇಬ್ಬರು ತೀರ್ಪುಗಾರರು; ಆದರೆ ಈ ಸಲ ಹನ್ನೊಂದು ತೀರ್ಪುಗಾರರು, ಇಬ್ಬರು ಆಟಗಾರರ ಸ್ಥಿತಿ ಇಲ್ಲಿ ಉಂಟಾಗಿದೆ. ಪೈಪೋಟಿ ತೀರ್ಪುಗಾರರಲ್ಲಿ!" ಎಂದರು. ಕಾಲಾಯ ತಸ್ಮೈನಮಃ

★★★★★

ಕಳ್ಳ ಖದೀಮರಿಗೂ ಸತ್ಯವಾಕ್ಯದ ಮೌಲ್ಯ ಗೊತ್ತು. ಅವರಿಗೂ ಹುಸಿ ಮಾತನ್ನು ಸ್ವಾಗತಿಸಲು ಇಷ್ಟವಿರಲಾರದು. ಇದಕ್ಕೊಂದು ಸೊಗಸಾದ ನಿದರ್ಶನವನ್ನು ಗಮನಿಸಿ. ಅಮಾವಾಸ್ಯೆಯ ನಡು ಇರುಳಿನಲ್ಲಿ ನಿಮ್ಮ ಮನೆಗೆ ಕಳ್ಳನೊಬ್ಬ (ನಿಮ್ಮ ಅನುಮತಿಯಿಲ್ಲದೆ!) ನುಗ್ಗಿ ಜಬರಿಸುತ್ತಾನೆ (ಶ್ರೀದೇವರ ದಯದಿಂದ ಇದು ವಾಸ್ತವಾಗದಿರಲಿ!). ಅವನ ಗರ್ಜನೆ ಈ ರೀತಿಯಿರಬಹುದು. 'ನಿಜ ಹೇಳು, ಕೀಲಿ ಗೊಂಚಲು ಎಲ್ಲಿದೆ?' ಅಂದರೆ ದರೋಡೆಕೋರನಿಗೂ ಬೇಕಾಗಿರುವುದು ಸತ್ಯವಾದಿತ್ವ, ಸುಳ್ಳುಮಾತನ್ನು ಸಹಿಸಲು ಅವನೂ ಸಿದ್ಧನಿಲ್ಲ! ಕಳ್ಳರ ನಿರೀಕ್ಷೆಯೂ ವಾಕ್ ಶುದ್ಧತೆ!

★★★★★

ಧರ್ಮ - ಅಧರ್ಮ, ನ್ಯಾಯ - ಅನ್ಯಾಯಗಳ ವಿವೇಚನೆ ಕಷ್ಟವೇ? ವಾಸ್ತವವಾಗಿ ಪರೀಕ್ಷಿಸಿದರೆ ಈ ವಿವೇಚನೆ ಬಹಳ ಸುಲಭ: ಅನುಷ್ಠಾನ ಮಾತ್ರ ಅಭ್ಯಾಸ ಹಾಗೂ ದೃಢನಿಶ್ಚಯಗಳಿಂದ ಬರಬೇಕಾದ್ದು. ಈ ಕುರಿತೊಂದು ನಿದರ್ಶನವನ್ನು ಗಮನಿಸೋಣ.

ಚಿನ್ನಪ್ಪ ಮತ್ತು ವಜ್ರಯ್ಯ ಗೆಳೆಯರು. ಅವರ ಹೆಸರಿಗೆ ತಕ್ಕಂತೆ ಅವರಿಗೆ ಹಣ ಸಂಪತ್ತು ಅಂದರೆ ಅತ್ಯಾಸೆ; ದುರಾಸೆಯೆಂದರೂ ಸರಿಯೆ. ಶ್ರಮವಹಿಸಿ ದುಡಿಯುವುದು ಎಂದೂ ಈ ಮಹಾಶಯರ ಸ್ವಭಾವವಾಗಿಲ್ಲದ್ದರಿಂದ ಕಳ್ಳತನದಲ್ಲಿ ಸಹಭಾಗಿಗಳಾಗುವ ಒಡಂಬಡಿಕೆ ಅವರಲ್ಲಿ. ಅಂದರೆ ನಡುರಾತ್ರಿಯ ಗುಪ್ತ ಸಹಕಾರದ ದಾರಿ. ಇಂಥ ಒಂದು ರಾತ್ರಿ ಕಾರ್ಯಭಾರದ ಬಳಿಕ ನಿದ್ರಾಯಾಸ ಪರಿಹಾರಕ್ಕೆ ಮರದ ಕೆಳಗೆ ಹಾಯಾಗಿ ಮಲಗುತ್ತಾರೆ, ಈ ವಿಶಿಷ್ಟ ಮಿತ್ರದ್ವಯರು. ದೋಚಿದ ಸಂಪತ್ತನ್ನು ಮರದ ಪೊಟರೆಯಲ್ಲಡಗಿಸಿಡುತ್ತಾರೆ. ಚಿನ್ನಪ್ಪನಿಗೆ ಮೊದಲು ಎಚ್ಚರವಾಗಿ, ದುರಾಲೋಚನೆಯೊಂದು ಅವನ ಮನಸ್ಸನ್ನು ಆಕ್ರಮಿಸಿದಾಗ ಆತ ಕಳ್ಳಮಾಲನ್ನೆಲ್ಲ ಎತ್ತಿಕೊಂಡು ಪರಾರಿಯಾಗುತ್ತಾನೆ. ತುಸು ಸಮಯದ ಬಳಿಕ ಎಚ್ಚೆತ್ತ ವಜ್ರಯ್ಯನಿಗೆ ಪರಿಸ್ಥಿತಿಯ ಅರಿವಾದಾಗ, ಅವನ ಉದ್ಗಾರ ಏನಿರಬಹುದು? "ಅಯ್ಯೋ, ಪಾಪ" ಎಂದೇ? ಅಲ್ಲ, ಅಲ್ಲ ಆತ ಕಿರಿಚುತ್ತಾನೆ, "ಅನ್ಯಾಯ, ಇದು ಮಹಾ ಅನ್ಯಾಯ!" ಅಂದರೆ ಕಳ್ಳನ ನಿರೀಕ್ಷೆಯೂ ನ್ಯಾಯದ ಆಚರಣೆ, ಅನ್ಯಾಯದ ಕ್ರಿಯೆ ಸಹಿಸಲು ಅವನೂ ಸಿದ್ಧನಿಲ್ಲ!

★★★★★

''ಕನ್ನಡಿಗ''

– ವಿಜಯರಾಜ ಸುತಾ

ಒಮ್ಮೆ ಕನ್ನಡಪ್ರೇಮಿ ಕಪಿನೀಪತಿರಾಯರಿಗೆ, ಕನ್ನಡೇತರರೆಲ್ಲರನ್ನೂ ಒಟ್ಟಾಗಿಸಿ ಅವರಿಗೆ ಕನ್ನಡ ಕಲಿಸುವ ಹೆಬ್ಬಯಕೆಯಾಗಿ ಒಂದು ಸಣ್ಣ ಸಂಘವನ್ನೇ ಸ್ಥಾಪಿಸಿದರು. ಇವರಲ್ಲಿಗೆ ಕನ್ನಡ ಕಲಿಯಲು ಪೆನುಗೊಂಡದ ಪದ್ಮಾವತಮ್ಮ, ಶ್ರೀರಂಗದ ಶ್ರೀರಂಗಮ್ಮ, ನಜರ್‌ಬಾದಿನ ಸಬೀನಾಬಾನು, ಹಾಗೂ ಮೇರಿಯಮ್ಮ ಸಡಗರದಿಂದ, ಬಹಳ ಆಸಕ್ತಿಯಿಂದ ಪ್ರತಿದಿನ ತಪ್ಪದೆ ಬರುತ್ತಿದ್ದರು. ತಮ್ಮ ಕರೆಗೆ ಓಗೊಟ್ಟು ಹೀಗೆ ಸರ್ವಧರ್ಮೀಯರೂ ಬಂದಿರುವುದು ರಾಯರಿಗೆ ಹಿಗ್ಗೋಹಿಗ್ಗು. ಪ್ರತಿದಿನ ಸಂಜೆ 5 ಗಂಟೆಯಿಂದ ಒಂದು ಗಂಟೆಯ ಕಾಲ ಕಲಿಯುವಿಕೆ ಎಂದು ತೀರ್ಮಾನಿಸಿದರು.

ಒಂದು ಸಂಜೆ, ತೆಲುಗು ಭಾಷಾ ಪಂಡಿತೆಯಾದ ಪದ್ಮಾವತಮ್ಮನವರು ''ಸಾರ್, ಈ ದಿನ ನಾನು ನನ್ನ ಕನ್ನಡಿಗನ ಜೊತೆ ಬಂದಿಲ್ಲ. ನೂಪ್ಪು ತಪ್ಪು ಬಾವಿಂಚಂಡಿ, ತಪ್ಪಾಯಿತು. ಖಂಡಿತಾ ನಾಳೆ ಮರೆಯದೆ ಕರೆದು ತರುತ್ತೇನೆ'' ಎಂದಾಗ,

ನೆರೆದಿದ್ದ ಇತರರು ತಬ್ಬಿಬ್ಬು, ಶ್ರೀರಂಗಮ್ಮನವರು ''ಡೀ, ಪದ್ಮಾವತೀ ಎನ್ನಾ ಇದು? ನಿನಗೆ ಕೊಂಚಮೂ ಕನ್ನಡ ವರುವುದೇ ಇಲ್ಲವಲ್ಲ, ನೀನು ಶೊಲ್ಲುವುದು ಏನೂ ಅರ್ಥವಾಗುವುದಿಲ್ಲವಲ್ಲ? ಎನ್ನ ಕಾಲವಂತುವಪ್ಪಾ? ಇಲ್ಲಿ ನೀನು ವಂದಿರುವುದು ಕನ್ನಡ ಕಲಿಯುವುದಕ್ಕೆ. ಯಾಕೆ ನಿನ್ನ ವೀಟ್ಟುಕಾರ ಇಲ್ಲಿಗೆ ಬರಬೇಕು? ಎಂದು ಕನ್ನಡ ತಮಿಳು ಸಮ್ಮಿಶ್ರಣ ಮಾಡುತ್ತಿರುವಾಗ, ಉರ್ದು ಭಾಷಾ ಪ್ರವೀಣೆ, ಸಬೀನಾ ''ಮಾಮಿ, ನೀವು ಸುಮ್ಕಿರಿ, ಇಸ್ಕೂಲಿಗೆ ಇದು ಬಂದಿರುವುದು ಕಲಿಯೂದಿಕ್ಕೆ ಹೈನಾ? ಇದಕ್ಕೆ ಗಂಡ ಮೈಸೂರಿನವ ಇರಬೇಕು. ಬಹುತ್ ಅಚ್ಚಾ! ಆ ಗಂಡ ಕನ್ನಡ ಹೇಳಿಕೊಡುತ್ತೆ. ಪಾಪಾ, ಕನ್ನಡ ಕಲೀಲಿಕ್ಕೆ ಈ ಇಸ್ತ್ರೀ ಎಷ್ಟು ಕಷ್ಟಾಪಡ್ತಾ ಐತೀ ಅಲ್ವಾ ಪದುಮಾವತಮ್ಮಾ?'' ಎಂದಾಗ ಪದ್ಮಾವತಮ್ಮ ಈ ತನ್ನ ಸಹಪಾಠಿಗಳು ತನ್ನನ್ನು ಏಕಾಏಕೀ ಹೀಗೆ ತರಾಟೆಗೆ ತೆಗೆದುಕೊಂಡು ತಮಾಷಿ ನೋಡುತ್ತಿರುವುದನ್ನು ಸಹಿಸಲಾರದೆ, ತಮ್ಮ ತೆಲುಗು ಮಿಶ್ರಿತ ಕನ್ನಡದಲ್ಲಿ ತಿರುಗುಬಾಣವನ್ನು ಬೀಸಿಯೇ ಬಿಟ್ಟರು.

''ಊರ್ಕೆ ಉಂಡಿ. ನಿಮಗೇ ಕನ್ನಡ ಬರೋವಚ್ಚು ನಾನು ಬೇರೆ ನಾಡಿನಿಂದ ಬಂದಿದ್ದರೂ ಕನ್ನಡ ಎಷ್ಟು ಬಾಗಾ ಚೆಪ್ಪುತ್ತೇನೆ ಚೂಡಂಡಿ, ನಿಮಗೇ ಕನ್ನಡ

ಚೆಪ್ಪಿಸ್ತಾನು ಉಂಡು, ನನ್ನ ಕನ್ನಡ ನೀವು ಆಡಿಕೊಳ್ಳುತ್ತೀರಲ್ಲಾ, ನೀವೇನು ಮಹಾ ಚನ್ನಾಗಿ ಮಾತನಾಡುತ್ತಿರುವುದು? ಕನ್ನಡ ತೆಲುಗು ಭಾಷೆಗಳು ಅಂತಭಾಗ ಭಾಷೆಗಳಂಡೀ, ನೀಕೇಮು ಗೊತ್ತು? ಎರಡರಲ್ಲೂ ಪದಗಳು ಒಂದೇ, ಬರವಣಿಗೆ ಕೂಡ ಒಂದೇ. ನಾನು ನಿಮ್ಮೂರಿಗೆ ವಚ್ಚಿ ಇನ್ನೂ ರೆಂಡು ವರ್ಷಗಳೇ ಆಯಿತು. ಆದರೆ ನೋಡಿ, ನಾನು ಎಂತಬಾಗ ಕನ್ನಡ ಹೇಳ್ತೀನಿ. ಸಾಮಿ, ನಿಮಗೂ ಬೇಕಾದರೆ ನಾನು ಸ್ವಲ್ಪ ಹೇಳಿಕೊಡುತ್ತೇನೆ'' ಎಂದು ರಾಯರಿಗೇ ಹೇಳಿದಾಗ ರಾಯರಿಗೂ ಬಹಳ ತಬ್ಬಿಬ್ಬಾಯಿತು. ಅವರು ''ತಾಯಿ''... ಎಂದು ಏನೋ ಹೇಳಲು ಪ್ರಯತ್ನಿಸುವಷ್ಟರಲ್ಲೇ ಶ್ರೀರಂಗಮ್ಮನವರು ತಮ್ಮ ಸೆರಗನ್ನು ಸರಿಮಾಡಿಕೊಂಡು, ಅಖಾಡಕ್ಕೇ ಇಳಿಯುವಂತೇ ಪದ್ಮಾವತಮ್ಮನನ್ನು ತಮ್ಮ ಸೊಗಸಾದ ತಮಿಳು ಮಿಶ್ರಿತ ಕನ್ನಡದಲ್ಲಿ ತರಾಟೆಗೇ ತೆಗೆದುಕೊಂಡರು.


''ಏಂಡೀ, ಪದ್ಮ, ಎನ್ನಾ ನೀನು ಶೊಲ್ಲುವುದು? ನಿನಕು ರೊಂಬಾ ಜಂಬ ವಂದಿದೆ. ನೀನು ರೊಂಬಾ ಪರವಾಯಿಲ್ಲೇ, ವಾದ್ಯಾರಿಗೇ ಶೊಲ್ಲು ಕೊಡುತ್ತೀಯಾ. ಇಂಗೆ ವರೂ ಹೆಂಗಸರು ಮಾತ್ರ ಪಾಠಕ್ಕೆ ವಂದಿರೋದು. ನಿನ್ನ ವೀಟ್ಟುಕಾರರನ್ನು ಏಕೆ ಇಲ್ಲಿ ಕರೆತರುತ್ತೀಯಾ? ನಾಂಗಳು ರೊಂಬ ಮರ್ಯಾದೆ ಮನೆಯಿಂದ ವಂದವರು.''

''ಹೂ, ಹೂ ಅಚ್ಚಾ, ಅಚ್ಚಾ ಬಾತ್ ಹೈಮಾಮಿ, ನೀನು ಸರಿಯಾಗಿ ಏಳಿದೆ. ಬರೀ ಇ ಸ್ತ್ರೀಯರಿರುವ ಇಲ್ಲಿಗೆ ಗಂಡಸರು ಬಂದರೆ ಎಂಗೆ? ಕ್ಯಾಬಾತ್‌ಹೈ? ಇದು ಸರಿ ಅಲ್ಲ. ಆ ಗಂಡಸು ಬರುವುದು ಬೇಡವೇಬೇಡ. ನಾವೆಲ್ಲ ಒಟ್ಟಾಗಿ ಸೇರಿ ಇಸ್ಕೂಲ್ ಮುಂದೆ ಇಸ್ಟ್ರೈಕ್ ಮಾಡಬೇಕಾಗ್ತದೆ ನೋಡು. ನಿಂದು ಜಾಸ್ತಿ ಆಯಿತು, ಪದುಮಾವತಮ್ಮಾ? ನೀನು ಸುಮ್ಕಿರು. ನೀನು ಬೇಕಾದರೆ ನಿಂದು ಗಂಡನ ಕೈಲೀ ಕನ್ನಡ ಕಲಿತುಕೋ. ನಮ್ದುಕೇ ಮಾತ್ರಾ ಆಗೊಲ್ಲ, ಬೇರೆ ಗಂಡಸರು ಇಲ್ಲಿ ಬರೋದಾದ್ರೆ, ನಾನು ಇಲ್ಲಿಗೇ ಬರಾಕೇ ಇಲ್ಲ, ನಮ್ದುಕೀ ಯಜಮಾನ ಬೈಯುತ್ತೆ.'' ಎಂದು ಸಬೀನಾಬಾನು ಉಲಿದಾಗ, ಈ ಪ್ರೌಢ ಲಲನಾಮಣಿಯರ ಬಾಯಲ್ಲಿ ಸಿಲುಕಿ, ನಲುಗಿ ಒದ್ದಾಡುತ್ತಿದ್ದ ಕನ್ನಡಮ್ಮನ ಜೊತೆಗೆ, ಕನ್ನಡ ಭಕ್ತ, ನಿಷ್ಠ ಕನ್ನಡಿಗ ಕಪಿನೀಪತಿರಾಯರೂ ವಿಲಿವಿಲಿ ಒದ್ದಾಡಲು ಪ್ರಾರಂಭಿಸಿದರು. ಈಗ ಎದ್ದಿರುವ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವಷ್ಟು, ಅವಕಾಶ ಕೊಡದೆ ಈ ನಾರಿಯರ ಹೋರಾಟವನ್ನು ಹೇಗೆ ನಿಲ್ಲಿಸುವುದು? ಎಂದು ಯೋಚಿಸುತ್ತಿರುವಷ್ಟರಲ್ಲಿ ಪದ್ಮಾವತಮ್ಮ ತನ್ನ ಕೈಚೀಲವನ್ನು ಪುನಃ ಹುಡುಕಿ, ಕೈಯಲ್ಲಿ ಕನ್ನಡಕದ ಕೇಸನ್ನು ತೆಗೆದು ಒಂದು ನಿಧಿಯೇ ದೊರಕಿದಷ್ಟು

ಸಂತೋಷದಿಂದ ಗುರುಗಳ ಮುಖಕ್ಕೇ ಕನ್ನಡಕವನ್ನು ಓಡಿದು, ''ಇಕ್ಕಡನೋಡು, ನನ್ನ ಕನ್ನಡಿಗ ಇಲ್ಲೇ ಉಂದಿ. ಅಬ್ಬಾ ಈವಾಗ ನಾನು ಓದಲಾ?'' ಎಂದಾಗ,

ರಾಯರಿಗೆ ತನ್ನಷ್ಟಕ್ಕೆ ತಾನೇ ಸಮಸ್ಯೆ ಪರಿಹಾರವಾಗಿದ್ದು ಮಾತ್ರವಲ್ಲದೆ, ಕನ್ನಡಿಗ ಯಾರು ಎಂದು ಎಲ್ಲರಿಗೂ ಈಗ ಅರ್ಥವಾಗಿ ಒಟ್ಟಿಗೇ ಎಲ್ಲರೂ ಆ ಕನ್ನಡಿಗನನ್ನು ಪದೇ ಪದೇ ನೋಡಿ, ನಕ್ಕು ನಕ್ಕು ಸುಸ್ತಾದರು. ರಾಯರೂ ಕೂಡ ಅಂದಿನ ಪಾಠ ಅಲ್ಲಿಗೇ ಮುಕ್ತಾಯ ಹಾಕಿ ನಾಳೆ ಎಲ್ಲರೂ ನಿಮ್ಮ ನಿಮ್ಮ ಕನ್ನಡಿಗವನ್ನು ಮರೆಯದೆ ತನ್ನಿ ಎಂದು ಹೇಳಿ ಹೊರಟರು. ಮೇರಿಯಮ್ಮನು ''ಸಧ್ಯ, ಏಸುತಂದೆ ದೊಡ್ಡವನು, ಸಮಸ್ಯೆಯನ್ನು ಬಗೆ ಹರಿಸಿದನು. ಬನ್ನಿ ಎಲ್ಲರೂ ಹೊರಡೋಣ. ಹೊತ್ತಾಯಿತು, ಕತ್ತಲಾದ ಮೇಲೆ ಸೈತಾನರ ಹಾವಳಿ ಹೆಚ್ಚು.''

ಹಾ! ಕನ್ನಡಾಂಬೇ ನಿನಗೆ ಎಂಥಾ ಅವಸ್ಥೆ ಬಂತಮ್ಮಾ! ತಾಯಿ ನಿನ್ನನ್ನು ನೀನೇ ರಕ್ಷಿಸಿಕೊಳ್ಳಬೇಕಮ್ಮಾ. ಕನ್ನಡವನ್ನೂ ಉಳಿಸಿ, ನಮ್ಮನ್ನೂ ಕಾಪಾಡಮ್ಮಾ ತಾಯಿ ಭುವನೇಶ್ವರಿ ಎಂದು ಪ್ರಾರ್ಥಿಸಿ, ಕನ್ನಡಿಗನನ್ನು ನೆನೆಸಿಕೊಳ್ಳುತ್ತಾ ರಾಯರು ತರಗತಿಗೆ ಬೀಗ ಹಾಕಿ ಹೊರಟರು.



ಮೂರುದಿನ ಈ ಗುಳಿಗೆ ತಗೊಳ್ಳಿ. ಕ್ರೋರ್ ಪತಿಗೆ ಸೆಲೆಕ್ಟ್ ಆಗ್ತೀರಾ

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010. Editor : M. SHIVAKUMAR